ನಗರಾಭಿವೃದ್ಧಿ ಪ್ರಾಧಿಕಾರ
ಚಿತ್ರದುರ್ಗ
2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

Office of the Senior Deputy Director
Local Audit Circle
Kelgote, opp-Basappa Hospital
Chitradurga-577501
E-mail: aclacchitradurga@gmail.com
Tel Phone No.08194-227410

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆ, ಬೆಂಗಳೂರು

ಹಿರಿಯ ಉಪ ನಿರ್ದೇಶಕರವರ ಕಛೇರಿ
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಬಸಪ್ಪ ಆಸ್ಪತ್ರೆ ಎದುರು, ಕೆಳಗೋಟೆ
ಚಿತ್ರದುರ್ಗ–೫೭೭೫೦೧
ದೂರವಾಣಿ ಸಂಖ್ಯೆ: 08194-227410
E-mail: aclacchitradurga@gmail.com

ಸಂಖ್ಯೆ:ಸ್ಥಲೆಚಿ/ನಗರಾಭಿವೃದ್ಧಿ ಪ್ರಾಧಿಕಾರ/2018–19/701 ದಿನಾಂಕ:27–10–2018

ಇವರಿಗೆ,

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಚಿತ್ರದುರ್ಗ.

ವಿಷಯ : 2017–18ನೇ ಸಾಲಿನ ನಗರಾಭಿವೃದ್ಧಿ ಪ್ರಾಧಿಕಾರ ಚಿತ್ರದುರ್ಗದ ಲೆಕ್ಕ ಪರಿಶೋಧನಾ ವರದಿಯನ್ನು ಕಳುಹಿಸಿಕೊಡುತ್ತಿರುವ ಬಗ್ಗೆ.

* * * *

2017–18ನೇ ಸಾಲಿನ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ. ಲೆಕ್ಕ ಪರಿಶೋಧನಾ ವರದಿಯು ತಲುಪಿದ ಒಂದು ತಿಂಗಳೊಳಗಾಗಿ ಪಾಲನಾ ವರದಿಯನ್ನು ನಿಯಮಾವಳಿಯ ಪ್ರಕಾರ ಕಳುಹಿಸಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಚಿತ್ರದುರ್ಗ

ನಗರಾಭಿವೃದ್ಧಿ ಪ್ರಾಧಿಕಾರದ ಚಿತ್ರದುರ್ಗ ಈ ಸಂಸ್ಥೆಯ 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿನ ಪ್ರಮುಖ ನ್ಯೂನತೆಗಳ ವಿವರ:–

ಕ್ರಮ ಸಂಖ್ಯೆ	ಕಂಡಿಕೆ ಸಂಖ್ಯೆ	ಪ್ರಮುಖ ನ್ಯೂನತೆಗಳ ವಿವರ
1	4	ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಪಾಲನ ವರದಿ ಸಲ್ಲಿಸದಿರುವುದು.
2	8	ನಗದು ಪುಸ್ತಕ ನಿರ್ವಹಣೆಯಲ್ಲಿ ಕಂಡುಬಂದ ನ್ಯೂನತೆಗಳು
3	17	ಸೇವಾ ವಹಿಗಳಲ್ಲಿ ಕಂಡು ಬಂದಂತಹ ನ್ಯೂನತೆಗಳು
4	18	ಪಿಂಚಣಿ ಪ್ರಾಧೀಕರಣದಲ್ಲಿ ಕಂಡುಬಂದಂತ ನ್ಯೂನತೆಗಳು
5	19	ಸ್ಲಂ ಇಂಪ್ರೋವ್‌ಮೆಂಟ್ ಸೆಸ್ಸು ಸಂಗ್ರಹ ಮೊತ್ತವನ್ನು ಕೊಳಚೆ ನಿರ್ಮೂಲನ ಮಂಡಳಿಗೆ ಜಮಾ ಮಾಡದಿರುವುದು
6	20	ಸಾಧಿಲ್ವಾರು ಬಿಲ್ಲು ಪಾವತಿಯಲ್ಲಿ ಕಂಡು ಬಂದಂತಹ ನ್ಯೂನತೆಗಳು
7	21	ನಗರ ಸಾರಿಗೆ ಕರ ಪಾವತಿಸದಿರುವುದು
8	22	ಜಿ.ಎಸ್.ಟಿ ಜಮಾ ಮಾಡದಿರುವುದು.
9	23	ಗುತ್ತಿಗೆ ಕರಾರು ಉಲ್ಲಂಘಿಸಿರುವ ಪ್ರಕರಣಗಳನ್ನು ಪತ್ತೆಹಚ್ಚಿ ದಂಡ ವಿಧಿಸದಿರುವುದು.
10	24	ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿಯಲ್ಲಿ ಕಂಡುಬಂದಂತಹ ನ್ಯೂನತೆಗಳು
11	25	ಆಸ್ತಿ ತೆರಿಗೆ ವಸೂಲಿಯ ತಗಾದೆ ವಹಿಯನ್ನು ನಿರ್ವಹಿಸದಿರುವುದು.
12	26	ನೆಹರು ಯುವ ಕೇಂದ್ರದ ಬಾಡಿಗೆ ಪಾವತಿಯಲ್ಲಿ ಕಂಡುಬಂದಂತಹ ನ್ಯೂನತೆಗಳು
13	27	ಪ್ರಾಧಿಕಾರದ ವಸತಿ ಬಡಾವಣೆ ಕೆಂಚನ ಕಟ್ಟೆ ಹಂತ–1 ಹಾಗೂ ಹಂತ–2ರ ವ್ಯಾಪ್ತಿಯಲ್ಲಿ ಬರುವ ಟ್ರೇಡ್ ಲೈಸೆನ್ಸ್ ಫೀ, ಜಾಹೀರಾತು ತೆರಿಗೆ ಹಾಗೂ ಮೊಬೈಲ್ ಟವರ್‌ಗಳಿಗೆ ತೆರಿಗೆ ವಿಧಿಸಿ ವಸೂಲಿಸದಿರುವುದು.
14	34	ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸದಿರುವುದು.
15	37	ನಗರ ಯೋಜನಾ ಮಂಡಳಿಗೆ ಉತ್ತಮತೆ ಶುಲ್ಕ ವಸೂಲಿಯ ಶೇಕಡ 5ರಷ್ಟು ವಂತಿಕೆ ಪಾವತಿಸದಿರುವುದು.
16	38	ಪಿಂಚಣಿ ಟ್ರಸ್ಟ್ ಫಂಡ್ ನಿರ್ವಹಿಸುವ ಬಗ್ಗೆ.

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಚಿತ್ರದುರ್ಗ

ನಗರಾಭಿವೃದ್ಧಿ ಪ್ರಾಧಿಕಾರ ಚಿತ್ರದುರ್ಗ ಈ ಸಂಸ್ಥೆಯ 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತದ ವಿವರ:–

ಕ್ರಮ ಸಂಖ್ಯೆ	ಪ್ಯಾರಾ ಸಂಖ್ಯೆ	ವಿವರ	ಆಕ್ಷೇಪಣಾ ಮೊತ್ತ	ವಸೂಲಾತಿ ಮೊತ್ತ
1	28	ಶ್ರೀಮತಿ. ಸಿ.ಎಸ್. ನಾಗಮಣಿ, ನಿವೃತ್ತ ಪ್ರ.ದ.ಸ ಇವರ ವೇತನ ತಪ್ಪಾಗಿ ನಿಗಧಿಪಡಿಸಿರುವುದರಿಂದ ವಯೋನಿವೃತ್ತ ಪಿಂಚಣಿ ಸೌಲಭ್ಯಗಳನ್ನು ಹೆಚ್ಚಗೆ ಪ್ರಾಧಿಕರಿಸಿರುವುದು.	–	50297
2	29	ಶ್ರೀ. ಎಸ್. ಶಿವಾನಂದಸ್ವಾಮಿ, ನಿವೃತ್ತ ನಗರ ಯೋಜನಾ ಸಹಾಯಕ ನಿರ್ದೇಶಕರು ಇವರ ವೇತನ ತಪ್ಪಾಗಿ ನಿಗದಿಪಡಿಸಿರುವುದರಿಂದ ವೇತನ ಭತ್ಯೆ ಹಾಗೂ ವಯೋ ನಿವೃತ್ತ ಪಿಂಚಣಿ ಸೌಲಭ್ಯಗಳನ್ನು ಹೆಚ್ಚಿಗೆ ಪ್ರಾಧೀಕರಿಸಿರುವುದು	–	60758
3	30	ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿ ಪಾವತಿಯ ಬಿಲ್ಲಿನಲ್ಲಿ ಕಂಡುಬಂದಂತಹ ನ್ಯೂನತೆಗಳು	–	
4	31	ಪ್ರೀಕ್ಯಾಸ್ಟ್ ಬೆಂಚುಗಳನ್ನು ಸರಬರಾಜು ಮಾಡಿ ನಗರದ ವಿವಿಧ ಪಾರ್ಕಗಳಲ್ಲಿ ಅಳವಡಿಸಿರುವ ಕಾಮಗಾರಿ ಪಾವತಿಯ ಬಿಲ್ಲಿನಲ್ಲಿ ಕಂಡುಬಂದಂತ ನ್ಯೂನತೆಗಳು	999960	–
5	32	ಕೆಂಚನಕಟ್ಟೆ ಹಂತ–1ರ ಭೀಮಸಂದ್ರ ರಸ್ತೆಯಲ್ಲಿ ಬೋರ್ ಕೊರೆದು ಪಂಪು ಮೋಟಾರ್ ಅಳವಡಿಸಿದ ಕಾಮಗಾರಿ ಪಾವತಿಯ ಬಿಲ್ಲಿನಲ್ಲಿ ಕಂಡು ಬಂದಂತಹ ನ್ಯೂನತೆಗಳು	500000	–
6	36	ಅಭಿವೃದ್ಧಿ ಶುಲ್ಕ ಕಡಿಮೆ ವಸೂಲಿ ಮಾಡುತ್ತಿರುವ ಬಗ್ಗೆ.	366706002	–
7	40	ಪಾವತಿಗೆ ಸಂಬಂಧಿಸಿದ ಬಿಲ್ಲುಗಳನ್ನು ಹಾಜರುಪಡಿಸದೇ ಇರುವುದು	391200	–
		ಒಟ್ಟು	**368597162**	**111055**

ಹಿರಿಯ ಉಪ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಚಿತ್ರದುರ್ಗ

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ ಚಿತ್ರದುರ್ಗ ಈ ಸಂಸ್ಥೆಯ 2017–18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ:–

1. ಪೀಠಿಕೆ:–

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯಿದೆ 1987ರ ಸೆಕ್ಷನ್ 1(3)ರ ಅನ್ವಯ ಸರ್ಕಾರದ ಅಧಿಸೂಚನೆಯ ಸಂಖ್ಯೆ:ಹೆಚ್.ಯು.ಡಿ181ಟಿ.ಟಿ.ಪಿ1988 ದಿನಾಂಕ:15–4–1988ರ ಅನ್ವಯ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ:1–5–1988 ರಿಂದ ಅಸ್ಥಿತ್ವಕ್ಕೆ ಬಂದಿರುತ್ತವೆ. ಈ ಸಂಸ್ಥೆಯ 2017–18ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987ರ ಸೆಕ್ಷನ್ 48(2)ರ ಅನ್ವಯ ಹಾಗೂ ಕರ್ನಾಟಕ ಯೋಜನಾಪ್ರಾಧಿಕಾರ ನಿಯಮಾವಳಿ 1965ರ ನಿಯಮ 23(2)ರ ಅನ್ವಯ ಕೈಗೊಳ್ಳಲಾಗಿದೆ. ಪ್ರಸುತ್ತ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಂತಹ ನ್ಯೂನತೆಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಅನುಸರಣಾ ವರದಿಯನ್ನು ಸಲ್ಲಿಸುವುದು.

2. ಲೆಕ್ಕ ಪರಿಶೋಧನೆಯ ವಿವರ:–

1	ಲೆಕ್ಕ ಪರಿಶೋಧನೆ ಕೈಗೊಂಡ ಸಿಬ್ಬಂದಿಯ ಹೆಸರು ಮತ್ತು ಪದನಾಮ	ಶ್ರೀ. ಬಿ.ಟಿ ಲಕ್ಷ್ಮೀರಂಗಯ್ಯ, ಲೆ.ಪ.ಅ ಶ್ರೀಮತಿ. ಎನ್.ಟಿ. ಸುನಂದ, ಲೆ.ಪ ಶ್ರೀ. ಎಂ. ಶ್ರೀನಿವಾಸ್, ಲೆ.ಪ ಕು॥ಸೌಮ್ಯಶ್ರೀ, ಸಿ.ಪಿ, ಪರೀಕ್ಷತಾ ಉಪನಿರ್ದೇಶಕರು ಶ್ರೀ. ಗಿರೀಶ್, ಹೆಚ್, ಪರೀಕ್ಷತಾ ಉಪನಿರ್ದೇಶಕರು
2	ಲೆಕ್ಕ ಪರಿಶೋಧನೆ ಪ್ರಾರಂಭ ದಿನಾಂಕ	21–6–2018
3	ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕ	3–7–2018
4	ಲೆಕ್ಕ ಪರಿಶೋಧನೆಗೆ ಉಪಯೋಗಿಸಿದ ಒಟ್ಟು ಮಾನವ ದಿನಗಳು	40 ಏಕ ಮಾನವದಿನಗಳು
5	ಲೆಕ್ಕ ಪರಿಶೋಧನಾ ವರದಿಯನ್ನು ಪುನರ್ ಪರಿಶೀಲನೆ ಮಾಡಿದ ಅಧಿಕಾರಿಯ ಹೆಸರು ಮತ್ತು ಪದನಾಮ	ಶ್ರೀ. ಎನ್.ಬಿ. ಶಿವರುದ್ರಪ್ಪ, ಅಪರ ನಿಯಂತ್ರಕರು
6	ಪುನರ್ ಪರಿಶೀಲನಾ ದಿನಾಂಕ	13–9–2018

3. ಸಂಸ್ಥೆಯ ಆಡಳಿತ ವರ್ಗದವರ ವಿವರ ಮತ್ತು ಅವಧಿ:

1	ಅಧ್ಯಕ್ಷರು	ಶ್ರೀ. ಎಂ.ಕೆ. ರಂಗಯ್ಯ ಭಾ.ಆ.ಸೇ ಶ್ರೀ. ಆರ್.ಕೆ. ಸರ್ದಾರ್	ದಿ:1–4–2017 ರಿಂದ 12–7–2017 ದಿ:13–7–2017 ರಿಂದ 31–3–2018
2	ಆಯುಕ್ತರು	ಶ್ರೀ. ಎಂ.ಎಸ್. ಸೋಮಶೇಖರ್, ಕೆ.ಎಂ.ಎ.ಎಸ್	ದಿ:1–4–2017 ರಿಂದ 31–3–2018
3	ಸಹಾಯಕ ಯೋಜನಾ ನಿರ್ದೇಶಕರು	ಶ್ರೀ ಎಸ್.ಶಿವಾನಂದ ಸ್ವಾಮಿ	ದಿ:1–4–2017 ರಿಂದ 31–3–2018
4	ಸಹಾಯಕ ಕಾರ್ಯಪಾಲಕ ಅಭಿಯಂತರರು	ಶ್ರೀ ಕೆ. ಆರ್. ಚಿದಾನಂದ ಶ್ರೀ ಅಲ್ಲಾಬಕ್ಷಾ	ದಿ:1–4–2017 ರಿಂದ 7–8–2017 ದಿ:18–08–2017 ರಿಂದ 31–3–2018

4. ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನ ವರದಿ ಸಲ್ಲಿಸದಿರುವುದು:–

ಈ ಸಂಸ್ಥೆಯ ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿ ತೀರುವಳಿಯಾಗದೇ ಬಾಕಿ ಉಳಿದಿರುವ ಪ್ಯಾರಗಳಿಗೆ ಅನುಪಾಲನ ವರದಿಯನ್ನು ಸಲ್ಲಿಸಿರುವುದಿಲ್ಲ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯಿದೆ 1987ರ ಸೆಕ್ಷನ್ 48(6)ರ ಅನ್ವಯ ಲೆಕ್ಕ ಪರಿಶೋಧನಾ ವರದಿ ಸ್ವೀಕರಿಸಿದ ತರುವಾಯ ಪ್ರಾಧಿಕಾರ ಸದರಿ ವರದಿಯಲ್ಲಿ ತೋರಿಸಿರುವ ಲೋಪದೋಷಗಳನ್ನು ಪರಿಹರಿಸಲು ಕ್ರಮ ತಗೆದು ಕೊಳ್ಳಬೇಕಾಗಿರುತ್ತದೆ ಹಾಗೂ ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸಲಾದ ಲೋಪದೋಷಗಳ ನಿವಾರಣೆಯ ಬಗ್ಗೆ ಕ್ರಮ ಕೈಗೊಂಡು ಮೂರು ತಿಂಗಳೊಳಗೆ ಅನುಪಾಲನ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.

ಲೆಕ್ಕ ಪರಿಶೋಧನಾ ವರದಿಯಲ್ಲಿನ ಲೋಪದೋಷಗಳ ನಿವಾರಣೆಯ ಬಗ್ಗೆ ಸಕಾಲಕ್ಕೆ ಆಯುಕ್ತರು ಕ್ರಮತೆಗೆದುಕೊಳ್ಳದೇ ಇದ್ದರೆ ಅಧಿಕಾರಿಗಳು/ನೌಕರರ ವರ್ಗಾವಣೆ/ನಿವೃತ್ತಿ/ಮರಣ ಹಾಗೂ ಇನ್ನಿತರೆ ಕಾರಣಗಳಿಂದ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೂಚಿಸಲಾದ ವಸೂಲಾತಿಯ ಮೊತ್ತ ಹಾಗೂ ಆಕ್ಷೇಪಣಾ ಮೊತ್ತ ತೀರುವಳಿ/ವಸೂಲಾಗದೇ ಸಂಸ್ಥೆಗೆ ನಷ್ಟಉಂಟಾಗುವ ಸಂಭವ ಹೆಚ್ಚಾಗಿರುತ್ತದೆ. ಈ ಹಿನ್ನೆಯಲ್ಲಿ ಸಂಸ್ಥೆಯ ಆಡಳಿತ ವರ್ಗ ಆದ್ಯ ಗಮನಹರಿಸಿ ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿ ತೀರುವಳಿಯಾಗದೇ ಬಾಕಿ ಉಳಿದಿರುವ ವಸೂಲಾತಿ ಹಾಗೂ ಆಕ್ಷೇಪಣಾ ಕಂಡಿಕೆಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಲು ಕ್ರಮ ತೆಗೆದುಕೊಳ್ಳುವುದು ಈ ಸಂಸ್ಥೆಯ ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿ ತೀರುವಳಿಯಾಗದೇ ಇರುವ ಆಕ್ಷೇಪಣಾ ಮೊತ್ತ ಹಾಗೂ ವಸೂಲಾತಿಯ ಮೊತ್ತದ ವರ್ಷವಾರು ವಿವರಗಳನ್ನು ಅನುಬಂಧ–1ರಲ್ಲಿ ತಿಳಿಸಿದೆ.

ವಿವರ	ಕಂಡಿಕೆ ಸಂಖ್ಯೆ	ಆಕ್ಷೇಪಣಾ ಮೊತ್ತ	ಕಂಡಿಕೆ ಸಂಖ್ಯೆ	ವಸೂಲಾತಿ ಮೊತ್ತ
01–04–2017ಕ್ಕೆ ಪ್ರಾರಂಭ ಶಿಲ್ಕು	247	245364005	234	30435264
2017–18ನೇ ಸಾಲಿನಲ್ಲಿ ಸೇರ್ಪಡೆ	4	**368597162**	2	111055
ಒಟ್ಟು	**251**	**613961167**	**236**	**30546319**
2017–18ನೇ ಸಾಲಿನಲ್ಲಿ ತೀರುವಳಿ	–	–	–	–
31–03–2018ಕ್ಕೆ ಅಖೈರು ಶಿಲ್ಕು	**251**	**613961167**	**236**	**30546319**

5. ಪ್ರಾಧಿಕಾರದ ಕಾರ್ಯ ಚಟುವಟಿಕೆ:–

ನಗರಾಭಿವೃದ್ಧಿ ಪ್ರಾಧಿಕಾರದ ಸ್ಥೂಲ ಕಾರ್ಯ ಚಟುವಟಿಕೆ ಕೆಳಕಂಡಂತೆ ಇರುತ್ತದೆ.

1. ಚಿತ್ರದುರ್ಗ ನಗರ ಪ್ರದೇಶಕ್ಕೆ ಸ್ಥಳೀಯ ಯೋಜನಾ ಪ್ರಾಧಿಕಾರದ ಪರಿಮಿತಿಯಲ್ಲಿ ಅಭಿವೃಧಿ ನಕ್ಷೆ ಹಾಗೂ ಯೋಜನಾ ನಕ್ಷೆಯನ್ನು ತಯಾರಿಸುವುದು.
2. ಮಹಾ ಯೋಜನೆಯ ಅನ್ವಯ ಸುಸ್ಥಿತಿಯಾದ ನಗರದ ಅಭಿವೃದ್ಧಿಗಾಗಿ ವಸತಿ ವಿನ್ಯಾಸವನ್ನು ಹಾಗೂ ಇತರೆ ನಗರಾಭಿವೃದ್ಧಿ ಚಟುವಟಿಕೆಗಳನ್ನು ಅನುಮೋದಿಸುವುದು
3. ವಸತಿ ವಿನ್ಯಾಸಗಳನ್ನು ನಾಗರೀಕ ಸೌಕರ್ಯ ಉದ್ಯಾನವನ ಹಾಗೂ ಕೆರೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಹಮ್ಮಿಕೊಳ್ಳುವುದು.
4. ವಸತಿಗಾಗಿ ಹಾಗೂ ಬಡಾವಣೆಗಳಿಗಾಗಿ ಅಭಿವೃದ್ಧಿ ನಕ್ಷೆ ಅನುಮೋದಿಸುವುದು.
5. ಕಟ್ಟಡ ನಕ್ಷೆ ಅನುಮೋದಿಸುವುದು ಹಾಗೂ ಪ್ರಾರಂಭಿಕ ಪ್ರಮಾಣ ಪತ್ರ ನೀಡುವುದು.
6. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಅಡಿಯಲ್ಲಿ ಶಾಸನಬದ್ಧ ಪ್ರಾಧಿಕಾರದ ಕಾರ್ಯಗಳನ್ನು ನಿರ್ವಹಿಸುವುದು.

6. ಪ್ರಾಧಿಕಾರದ ಆಯ–ವ್ಯಯದ ಬಗ್ಗೆ:

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಸೆಕ್ಷನ್ 43ರ ಅನ್ವಯ ಪ್ರತಿ ವರ್ಷ ಫೆಬ್ರವರಿ ಒಂದನೇ ತಾರೀಖಿನೊಳಗೆ ಪ್ರಾಧಿಕಾರದ ಆಯವ್ಯಯವನ್ನು ತಯಾರಿಸಿ ಪ್ರಾಧಿಕಾರದ ಸಭೆಯ ಅನುಮೋದನೆಯನ್ನು ಪಡೆಯ ಬೇಕಾಗಿರುತ್ತದೆ. ಈ ಸಂಸ್ಥೆಯ 2017–18ನೇ ಸಾಲಿನ ಆಯವ್ಯಯ ಪತ್ರವನ್ನು ತಯಾರಿಸಿ ದಿ:1–2–2017ರಂದು ಪ್ರಾಧಿಕಾರದ ಸಭೆಯ ಅನುಮೋದನೆಯನ್ನು ಪಡೆಯ ಲಾಗಿದೆ. ಆಯವ್ಯಯವನ್ನು ನಿಗದಿತ ಸಮಯದೊಳಗೆ ಪ್ರಾಧಿಕಾರದ ಅನುಮೋದನೆಯನ್ನು ಪಡೆಯ ಲಾಗಿದೆ. ಅನುಮೋದಿತ ಆಯವ್ಯಯವನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ. 2017–18ನೇ ಸಾಲಿನ ಅನುಮೋದಿತ ಆಯವ್ಯಯ ಹಾಗೂ ವಾಸ್ತವಿಕ ಜಮಾ ಹಾಗೂ ಖರ್ಚಿನ ವಿವರ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ಆಯ–ವ್ಯಯ ಪತ್ರದ ಪ್ರಕಾರ		ವಾಸ್ತವಿಕ
1	ಒಟ್ಟು ಜಮಾ	441417000	187386137
2	ಒಟ್ಟು ಖರ್ಚು	432705000	210340979

2017–18ನೇ ಸಾಲಿನ ಪ್ರಾಧಿಕಾರದಿಂದ ಮಂಜೂರಾದ ಆಯವ್ಯಯ ಪತ್ರವನ್ನು ಪರಿಶೀಲಿಸಲಾಗಿ ವಾಸ್ತವಿಕ ಜಮಾ ಹಾಗೂ ಖರ್ಚು ಅಂಕಿ ಅಂಶಗಳಿಗೆ ಬಾರಿ ವ್ಯತ್ಯಾಸ ಕಂಡುಬರುತ್ತಿದೆ. ವಾಸ್ತವಿಕ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಹಿಂದಿನ ವರ್ಷ ವಾಸ್ತವಿಕ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಂಡು ವಾಸ್ತವಿಕವಾಗಿ ಹತ್ತಿರವಿರುವಂತಹ ಅಂಕಿಅಂಶಗಳನ್ನು ಗಣನೆಗೆ ತೆಗೆದುಕೊಂಡು ಆಯವ್ಯಯವನ್ನು ತಯಾರಿಸಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು ಸೂಕ್ತವಾಗಿರುತ್ತದೆ.

7. ಆರ್ಥಿಕ ಪರಿಸ್ಥಿತಿ:–

2017–18ನೇ ಸಾಲಿಗೆ ಪ್ರಾಧಿಕಾರದ ಎಲ್ಲಾ ನಿಧಿಗಳ ಕ್ರೋಢೀಕೃತ ಆರ್ಥಿಕ ಪರಿಸ್ಥಿತಿ ಕೆಳಕಂಡಂತೆ ಇರುತ್ತದೆ.

1	1/4/2017ಕ್ಕೆ ಪ್ರಾರಂಭಿಕ ಶಿಲ್ಕು	75313871
2	2017–18ನೇ ಸಾಲಿಗೆ ಜಮಾ	187386137
3	ಒಟ್ಟು	262700008
4	2017–18ನೇ ಸಾಲಿಗೆ ಪಾವತಿ	210340979
5	31/3/2018ಅಖೈರು ಶಿಲ್ಕು	52359029

ದಿನಾಂಕ:31–3–2018ರ ಅಂತ್ಯಕ್ಕೆ ಲೆಕ್ಕಗಳ ಸಮನ್ವಯ :–

1	ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು	52359029
2	ಬ್ಯಾಂಕ್ ಪಾಸ್ ಶೀಟ್ ಪ್ರಕಾರ ಅಂತಿಮ ಶಿಲ್ಕು	65330131
3	ಒಟ್ಟು ವ್ಯತ್ಯಾಸ	12971102

ವ್ಯತ್ಯಾಸಕ್ಕೆ ಕಾರಣ :– ದಿ:31–3–2018ರ ಅಂತ್ಯಕ್ಕೆ ನಗದಾಗದೇ ಇರುವ ಚೆಕ್ಕುಗಳು ಸದರಿ ಚೆಕ್ಕುಗಳ ವಿವರವನ್ನು ಅನುಬಂಧ:–03ರಲ್ಲಿ ವರದಿಗೆ ಲಗತ್ತಿಸಿದೆ ಹಾಗೂ ಈ ಸಂಸ್ಥೆಯ ನಿಧಿವಾರು ಹಾಗೂ ಕ್ರೋಡಿಕರಿಸಿದ ಆರ್ಥಿಕ ಪರಿಸ್ಥಿತಿಯ ವಿವರವನ್ನು ಅನುಬಂಧ:02ರಲ್ಲಿ ವರದಿಗೆ ಲಗತ್ತಿಸಿದೆ. ಈ ಸಂಸ್ಥೆಯ 2017–18ನೇ ಸಾಲಿನ ವರ್ಗೀಕೃತ ಜಮಾ ಹಾಗೂ ಖರ್ಚಿನ ವಿವರವನ್ನು ಅನುಬಂಧ–4ರಲ್ಲಿ ವರದಿಗೆ ಲಗತ್ತಿಸಿದೆ.

8. ನಗದು ಪುಸ್ತಕ ನಿರ್ವಹಣೆಯಲ್ಲಿ ಕಂಡುಬಂದತಹ ನ್ಯೂನತೆಗಳು:–

ಈ ಸಂಸ್ಥೆಯಲ್ಲಿ ನಿಧಿವಾರು ನಗದು ಪುಸ್ತಕಗಳನ್ನು ನಿರ್ವಹಿಸಿರುತ್ತಾರೆ. ಸದರಿ ವಹಿಗಳನ್ನು ಪರಿಶೀಲಿಸಿದಾಗ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತವೆ.

1. ನಗದು ಪುಸ್ತಕ ಉಪಯೋಗಿಸುವ ಮುಂಚೆ ನಗದು ಪುಸ್ತಕದಲ್ಲಿ ಇರುವ ಪೇಜ್ ನಂಬರ್ ಹಾಕಿ ಆಯುಕ್ತ ದೃಢೀಕರಿಸಿರುವುದಿಲ್ಲ.
2. ಪ್ರತಿ ದಿನದ ವ್ಯವಹಾರವನ್ನು ಕ್ಯಾಶ್ ಪುಸ್ತಕದಲ್ಲಿ ಆಯುಕ್ತರು ಪರಿಶೀಲಿಸಿ ದೃಡೀಕರಿಸಿಲ್ಲ
3. ಪ್ರತಿ ತಿಂಗಳ ಅಂತ್ಯಕ್ಕೆ ನಗದು ಪುಸ್ತಕದಲ್ಲಿ ಇರುವ ಶಿಲ್ಕಿಗೂ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ಇರುವ ಶಿಲ್ಕಿಗೂ ಲೆಕ್ಕ ಸಮನ್ವಯ ಮಾಡಿಕೊಂಡಿರುವುದಿಲ್ಲ
4. ತಿಂಗಳು ವರ್ಷದ ಅಂತ್ಯಕ್ಕೆ ನಗದು ಪುಸ್ತಕದಲ್ಲಿ ಲೆಕ್ಕ ಸಮನ್ವಯ ಮಾಡಿ ನಗದಾಗದೇ ಇರುವ ಚೆಕ್ಕುಗಳ ವಿವರ ನಮೂದಿಸಿಲ್ಲ ಹಾಗೂ ಆಯುಕ್ತರು ದೃಢೀಕರಿಸಿಲ್ಲ

ಮೇಲ್ಕಂಡ ನ್ಯೂನತೆಗಳ ನಿವಾರಣೆಗೆ ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು ಅಗತ್ಯವಾಗಿರುತ್ತದೆ.

9. ಠೇವಣಿಗಳು:–

ಠೇವಣಿ ವಹಿಯನ್ನು ನಿರ್ವಹಿಸಿರುತ್ತಾರೆ. ಸದರಿ ವಹಿಯನ್ನು ಪರಿಶೀಲಿಸಲಾಗಿ 2017–18ನೇ ಸಾಲಿಗೆ ಠೇವಣಿಗಳ ವ್ಯವಹಾರ ಈ ಕೆಳಕಂಡಂತೆ ಇರುತ್ತದೆ.

ವಿವರ	ಇ.ಎಂ.ಡಿ ಮೊತ್ತ	ಸುರಕ್ಷಿತ ಠೇವಣಿ	ಒಟ್ಟು
1–4–2017ಕ್ಕೆ ಪ್ರಾರಂಭ ಶಿಲ್ಕು	766110	141498	907608
2017–18ರಲ್ಲಿನ ಠೇವಣಿಗಳು	–	–	–
ಒಟ್ಟು ರೂ	766110	141498	907608
2017–18ರಲ್ಲಿ ಮರು ಪಾವತಿ	–	–	–
31–3–2018ರ ಅಂತ್ಯಕ್ಕೆ ಶಿಲ್ಕು	766110	141498	907608

ಠೇವಣಿ ವಹಿಯನ್ನು ಪರಿಶೀಲಿಸಲಾಗಿ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಗುತ್ತಿಗೆ ಸರಬರಾಜುದಾರರು ಪಾವತಿಸಿರುವ ಇ.ಎಂ.ಡಿ ಹಾಗೂ ಭದ್ರತಾ ಠೇವಣಿ ಬಾಕಿ ಉಳಿದಿರುವುದು ಕಂಡು ಬಂದಿರುತ್ತದೆ. ಸದರಿ ಠೇವಣಿಗಳಲ್ಲಿ ಮೆ॥ ಗೌತಮ್, ಎಲೆಕ್ಟಿಕಲ್ಸ್ ಚಿಂತಾಮಣಿ ಇವರು ಪಾವತಿಸಿರುವ ಠೇವಣಿ ರೂ.95586/– ಹಾಗೂ ಮುಂಗಡ ಠೇವಣಿ(ಇ.ಎಂ.ಡಿ)ರೂ.32125/– ಹಾಗೂ ರೂ.31025/– ಗಳನ್ನು ಪ್ರಾಧಿಕಾರದ ಸಭೆಯ ಠರಾವು ನಂ:18 ದಿನಾಂಕ:28–5–2012ರಲ್ಲಿ ಮುಟ್ಟುಗೋಲು ಹಾಕಿ ಕೊಳ್ಳಲು ತೀರ್ಮಾನಿಸಿದ್ದರೂ ಇದುವರೆವಿಗೂ ಮುಟ್ಟುಗೋಲು ಹಾಕಿ ಕೊಂಡಿರುವುದಿಲ್ಲ. ಮೇಲ್ಕಂಡ ಠೇವಣಿಗಳನ್ನು ಪ್ರಾಧಿಕಾರದ ನಿಧಿಗೆ ಹೊಂದಾಣಿಕೆ ಮಾಡಿಕೊಂಡು ಠೇವಣಿ ವಹಿಯನ್ನಲ್ಲಿ ತೀರುವಳಿ ಮಾಡಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು ಉಳಿದೆಲ್ಲಾ ಇ.ಎಂ.ಡಿ ಹಾಗೂ ಭದ್ರತಾ ಠೇವಣಿಗಳು 3 ವರ್ಷಗಳಿಗೂ ಮೇಲ್ಪಟಿರುವುದರಿಂದ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 240(ಡಿ)ರ ಅನ್ವಯ ವ್ಯಪಗತ ಠೇವಣಿ (lapsed deposits)ಎಂದು ಪರಿಗಣಿಸಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು ಸೂಕ್ತವಾಗಿರುತ್ತದೆ.

10. ನಿಶ್ಚಿತ ಠೇವಣಿಗಳ ಬಗ್ಗೆ:–(ಹೂಡಿಕೆಗಳು)

ನಿಶ್ಚಿತ ಠೇವಣಿವಹಿಯನ್ನು ನಿರ್ವಹಿಸಿರುತ್ತಾರೆ. ಸದರಿ ವಹಿಯನ್ನು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರವು ತೊಡಗಿಸಿರುವ ನಿಶ್ಚಿತ ಠೇವಣಿ ಪತ್ರಗಳನ್ನು ಪರಿಶೀಲಿಸಿದಾಗ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತವೆ.

1. ಸರ್ಕಾರದ ಸುತ್ತೋಲೆ ಸಂಖ್ಯೆ:ನ.ಅ.15 ಎಂ.ಐ.ಬಿ.2013 ದಿನಾಂಕ:18–11–2013ರ ಅನ್ವಯ ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಯೋಜನಾ ಪ್ರಾಧಿಕಾರಗಳು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿಯನ್ನು ಇಡಬೇಕಾಗಿರುತ್ತದೆ. ಆದರೆ ಈ ಸಂಸ್ಥೆಯಲ್ಲಿ ಪ್ರಗತಿ ಕೃಷ್ಣಾ ಗ್ರಾಮೀಣ ಬ್ಯಾಂಕ್ ಹಾಗೂ ಹೆಚ್.ಡಿ.ಎಫ್.ಸಿ ಖಾಸಗಿ ಬ್ಯಾಂಕಿನಲ್ಲಿ ಠೇವಣಿ ಮಾಡಿರುವುದು ಮೇಲ್ಕಂಡ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವಂತೆ ಮಾರ್ಗಸೂಚಿ ಉಲ್ಲಂಘನೆ ಯಾಗಿರುತ್ತದೆ. ಖಾಸಗಿ ಬ್ಯಾಂಕ್ ಹಾಗೂ ಗ್ರಾಮೀಣ ಬ್ಯಾಂಕ್‌ಗಳಲ್ಲಿ ತೊಡಗಿಸಿರುವ ಠೇವಣಿ ಯನ್ನು ಹಿಂಪಡೆದು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ತೊಡಗಿಸಲು ಕ್ರಮ ವಹಿಸಬೇಕಾಗಿರುತ್ತದೆ.
2. ನಿಶ್ಚಿತ ಠೇವಣಿಯನ್ನು ಬ್ಯಾಂಕಿನಲ್ಲಿ ಠೇವಣಿ ಇಟ್ಟ ನಂತರ ಬ್ಯಾಂಕಿಗೆ ಪತ್ರ ಬರೆದು ಬ್ಯಾಂಕಿನಲ್ಲಿ ಠೇವಣಿ ತೊಡಗಿಸಿದ ಮೊತ್ತದ ಬಗ್ಗೆ ಬ್ಯಾಂಕಿನಿಂದ ಪತ್ರದ ಮುಖೇನ ಖಾತ್ರಿ ಪಡಿಸಿಕೊಂಡಿಲ್ಲ
3. ಆರ್ಥಿಕ ವರ್ಷದ ಅಂತ್ಯಕ್ಕೆ ಬ್ಯಾಂಕಿನಿಂದ ಪ್ರಾಧಿಕಾರವು ಬ್ಯಾಂಕಿನಲ್ಲಿ ತೊಡಗಿಸಿರುವ ನಿಶ್ಚಿತ ಠೇವಣಿಗಳ ಬಗ್ಗೆ ಪತ್ರದ ಮುಖೇನ ಖಾತ್ರಿ ಪಡಿಸಿಕೊಂಡಿಲ್ಲ
4. ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ನಗರಾಭಿವೃದ್ಧಿ ಪ್ರಾಧಿಕಾರವು ಹೂಡಿಕೆ ಸಮಿತಿಯನ್ನು ರಚಿಸಿಕೊಂಡಿಲ್ಲ (Investment committe) ಹಾಗೂ ನಿಶ್ಚಿತ ಠೇವಣಿಯಲ್ಲಿ ತೊಡಗಿಸಲು ಪ್ರಾದಿಕಾರದಿಂದ ಅನುಮತಿ ಪಡೆದುಕೊಂಡಿಲ್ಲ.
5. ಪ್ರಾಧಿಕಾರವು ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಮುನ್ನ ರಾಷ್ಟ್ರೀಕೃತ ಬ್ಯಾಂಕುಗಳಿಂದ ಬಡ್ಡಿಯ ದರಪಟ್ಟಿ ಪಡೆದುಕೊಂಡಿಲ್ಲ ಪ್ರಾಧಿಕಾರಕ್ಕೆ ಆರ್ಥಿಕವಾಗಿ ಲಾಭದಾಯಕವಾಗುವಂತೆ ಅತಿ ಹೆಚ್ಚು ಬಡ್ಡಿದರ ನೀಡಿದ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ತೊಡಗಿಸಬೇಕಾಗಿರುತ್ತದೆ.

ಮೇಲ್ಕಂಡ ನ್ಯೂನತೆಗಳ ನಿವಾರಣೆಯ ಬಗ್ಗೆ ನಗರಾಭಿವೃದ್ಧಿ ಪ್ರಾಧಿಕಾರವು ಸೂಕ್ತ ಕ್ರಮ ವಹಿಸುವುದು ಅಗತ್ಯವಾಗಿರುತ್ತದೆ. 2017–18ನೇ ಸಾಲಿಗೆ ಈ ಸಂಸ್ಥೆಯ ನಿಶ್ಚಿತ ಠೇವಣಿಗಳ ವ್ಯವಹಾರ ಕೆಳಕಂಡಂತೆ ಇರುತ್ತದೆ.

ವಿವರ	ಒಟ್ಟು
1–4–2017ಕ್ಕೆ ಪ್ರಾರಂಭಿಕ ಶಿಲ್ಕು	80784156
2017–18ಸಾಲಿಗೆ ನಿಶ್ಚಿತ ಠೇವಣಿ	125085744
ಒಟ್ಟು ರೂ	205869900
2017–18ನೇ ಸಾಲಿಗೆ ನಗಧೀಕರಣ	65900000
31–3–2018ಕ್ಕೆ ಉಳಿಕೆ ಠೇವಣಿ	139969900

ದಿನಾಂಕ:31–3–2018ರ ಅಂತ್ಯಕ್ಕೆ ಇರುವ ನಿಶ್ಚಿತ ಠೇವಣಿಗಳ ವಿವರವನ್ನು ಅನುಬಂಧ:05ರಲ್ಲಿ ವಿವರಿಸಿದೆ.

11. ಸಾಲಗಳ ಬಗ್ಗೆ :–

ಈ ಸಂಸ್ಥೆಯಲ್ಲಿ ಸಾಲದ ವಹಿಯನ್ನು ನಿರ್ವಹಿಸಿರುವುದಿಲ್ಲ ಸಾಲದ ವಹಿಯನ್ನು ನಿರ್ವಹಿಸಲು ತಿಳಿಸಿದೆ. 2017–18ನೇ ಸಾಲಿಗೆ ಪ್ರಾಧಿಕಾರದಲ್ಲಿ ಸಾಲದ ಸ್ವೀಕೃತಿ ಹಾಗೂ ಮರು ಪಾವತಿ ಯಾವುದು ಇರುವುದಿಲ್ಲ.

12. ಮುಂಗಡಗಳ ಬಗ್ಗೆ :–

ಮುಂಗಡ ವಹಿಯನ್ನು ನಿರ್ವಹಿಸಿರುತ್ತಾರೆ. ಸದರಿ ವಹಿಯನ್ನು ಪರಿಶೀಲಿಸಲಾಗಿ 2017–18ನೇ ಸಾಲಿಗೆ ಯಾವುದೇ ಮುಂಗಡ ಪಾವತಿ, ವಸೂಲಿ ಹಾಗೂ ಹೊಂದಾಣಿಕೆ ಇರುವುದಿಲ್ಲ.

13. ಅನುದಾನಗಳ ಬಗ್ಗೆ:–

ಅನುದಾನದ ವಹಿಯನ್ನು ನಿರ್ವಹಿಸಿರುವುದಿಲ್ಲ ಹಾಗೂ 2017–18ನೇ ಸಾಲಿಗೆ ಈ ಸಂಸ್ಥೆಗೆ ಸರ್ಕಾರದಿಂದ ಯಾವುದೇ ಅನುದಾನ ಬಂದಿರುವುದಿಲ್ಲ.

14. ರಸೀದಿ ಪುಸ್ತಕಗಳ ಹಾಗೂ ಇತರೆ ಹಣ ಮೌಲ್ಯದ ಫಾರಂಗಳ ಸ್ವೀಕೃತಿ ವಿತರಣೆ ಹಾಗೂ ಉಳಿಕೆಯ ಬಗ್ಗೆ :–

2017–18ನೇ ಸಾಲಿಗೆ ರಶೀದಿ ಪುಸ್ತಕಗಳ ಹಾಗೂ ಇತರೆ ಹಣ ಮೌಲ್ಯದ ಫಾರಂಗಳ ಸ್ವೀಕೃತಿ ವಿತರಣೆ, ಉಪಯೋಗ ಹಾಗೂ ಉಳಿಕೆಯ ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ವಿವರಗಳು	1–4–2017ಕ್ಕೆ ಪ್ರಾರಂಭ ಶಿಲ್ಕು	2017–18 ರಲ್ಲಿ ಸ್ವೀಕೃತಿ	ಒಟ್ಟು	2017–18 ರಲ್ಲಿ ವಿತರಣೆ ಉಪಯೋಗ	31–3–2018ಕ್ಕೆ ಅಖೈರು ಶಿಲ್ಕು
1	ರಶೀದಿ ಪುಸ್ತಕಗಳು	07	38	45	18	27
2	ನೀರು ಪೂರೈಕೆ ರಶೀದಿ ಪುಸ್ತಕಗಳು	07	–	07	–	07
3	ನಿವೇಶನ ನೊಂದಣಿ ರಶೀದಿ ಪುಸ್ತಕಗಳು	02	–	02	–	02
4	ಅಭಿವೃದ್ಧಿ ಶುಲ್ಕದ ರಶೀದಿ ಪುಸ್ತಕಗಳು	07	–	07	–	07
5	ನಿವೇಶನ ಅರ್ಜಿಗಳು	2500	–	2500	–	2500
6	ನಿವೇಶನ ನೊಂದಣಿ ಕಾರ್ಡುಗಳು ಹಳದಿ	100	–	100	–	100
7	ನಿವೇಶನ ನೊಂದಣಿ ಕಾರ್ಡುಗಳು ಕೆಂಪು	25	–	25	–	25
8	ನಿವೇಶನ ನೊಂದಣಿ ಕಾರ್ಡುಗಳು ಬಿಳಿ	200	–	200	–	200
	ಒಟ್ಟು					

15. ಭಾಗಶಃ ಉಪಯೋಗಿಸಿರುವ ರಸೀದಿ ಪುಸ್ತಕಗಳ ವಿವರ:

2017–18ನೇ ಸಾಲಿನಲ್ಲಿ ಭಾಗಶಃ ಉಪಯೋಗಿಸಿರುವ ರಸೀದಿ ಪುಸ್ತಕಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ರಸೀದಿ ಪುಸ್ತಕ ಸಂಖ್ಯೆ	ರಸೀದಿ ಸಂಖ್ಯೆ ರಿಂದ ರವರೆಗೆ / ಉಪಯೋಗಿಸಿದ ದಿನಾಂಕ
1	241	18501 ರಿಂದ 18523 ದಿ:27–03–2018

ಸದರಿ ಭಾಗಶಃ ರಶೀದಿ ಪುಸ್ತಕವನ್ನು 2018–19ನೇ ಸಾಲಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ತಿಳಿಸಿದೆ.

16. 2016–17ನೇ ಸಾಲಿನಲ್ಲಿ ಭಾಗಶಃ ಪರಿಶೀಲಿಸಿದ ರಸೀದಿ ಪುಸ್ತಕಗಳನ್ನು ಪೂರ್ಣ ಪರಿಶೀಲಿಸಿರುವುದು:–

2016–17ನೇ ಸಾಲಿನಲ್ಲಿ ಈ ಕೆಳಕಾಣಿಸಿದ ರಸೀದಿ ಪುಸ್ತಕಗಳನ್ನು ಭಾಗಶಃ ಪರಿಶೀಲಿಸಿದ್ದು ಸದರಿ ರಸೀದಿ ಪುಸ್ತಕವನ್ನು 2017–18ನೇ ಸಾಲಿನಲ್ಲಿ ಪೂರ್ಣವಾಗಿ ಪರಿಶೀಲಿಸಲಾಗಿರುತ್ತದೆ ವಿವರ ಈ ಕೆಳಗಿನಂತಿದೆ.

ಕ್ರಮ ಸಂಖ್ಯೆ	ರಸೀದಿ ಪುಸ್ತಕ ಸಂಖ್ಯೆ	ರಸೀದಿ ಸಂಖ್ಯೆ ರಿಂದ ರವರೆಗೆ /ದಿನಾಂಕ
1	223	21520/1–4–2017 ರಿಂದ 21550/6–4–2017

17. ಸೇವಾ ವಹಿಯಲ್ಲಿ ಕಂಡುಬಂದಂತಹ ನ್ಯೂನತೆಗಳು:–

2017–18ನೇ ಸಾಲಿನ ಪ್ರಾಧಿಕಾರದ ನೌಕರರ ಸೇವಾ ವಹಿಯನ್ನು ಪರಿಶೀಲಿಸಲಾಗಿ ಈ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತದೆ.

1. ಪ್ರಾಧಿಕಾರದ ನೌಕರರಿಗೆ ಒಂದೇ ಹುದ್ದೆಯಲ್ಲಿ 10,15,20,25 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಕಾಲಮಿತಿ ವೇತನ ಬಡ್ತಿ, ಸ್ವಯಂಚಾಲಿತ ಬಡ್ತಿ ಹಾಗೂ ಹೆಚ್ಚುವರಿ ವೇತನ ಬಡ್ತಿಯನ್ನು ನೀಡಿದ್ದು ಕಛೇರಿ ಆದೇಶಗಳನ್ನು ಹೊರಡಿಸಿರುವುದಿಲ್ಲ ಹಾಗೂ ಸೇವಾ ವಹಿಯಲ್ಲಿ ಸ್ಪಷ್ಟವಾಗಿ ಬರೆದಿರುವುದಿಲ್ಲ
2. ಮಾರ್ಚ್–31ರ ಅಂತ್ಯಕ್ಕೆ ವೇತನ ಬಟವಾಡೆಯೊಂದಿಗೆ ಪರಿಶೀಲಿಸಿ ಸೇವಾ ಪುಸ್ತಕದಲ್ಲಿ ದಾಖಲಿಸಿ ದೃಢೀಕರಿಸಿರುವುದಿಲ್ಲ
3. ಕಾಲಕಾಲಕ್ಕೆ ಸರ್ಕಾರದಿಂದ ವೇತನ ಶ್ರೇಣಿಗಳನ್ನು ಪರಿಷ್ಕರಣೆ ಮಾಡಿದಾಗ ವೇತನವನ್ನು ಪರಿಷ್ಕೃತ ವೇತನ ಶ್ರೇಣಿಯಲ್ಲಿ ನಿಗದಿ ಪಡಿಸಿರುವುದರ ಬಗ್ಗೆ ದಾಖಲಿಸಿರುವುದಿಲ್ಲ.
4. ಸೇವಾ ವಹಿಯಲ್ಲಿ ದಾಖಲು ಮಾಡಿದ ನಮೂದುಗಳನ್ನು ದೃಢೀಕರಿಸಿರುವುದಿಲ್ಲ.

ಮೇಲ್ಕಂಡಂತೆ ಸೇವಾ ವಹಿಯಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ವಹಿಸುವುದು.

18. ಪಿಂಚಣಿ ಪ್ರಾಧಿಕರಣದಲ್ಲಿ ಕಂಡುಬಂದಂತಹ ನ್ಯೂನತೆಗಳು:–

ನಗರಾಭಿವೃದ್ಧಿ ಪ್ರಾಧೀಕರಣ ಸಿಬ್ಬಂದಿಯವಾರ ಶ್ರೀ. ಶಿವಾನಂದಸ್ವಾಮಿ ನಗರ ಯೋಜನಾ ಸಹಾಯಕ ನಿರ್ದೇಶಕರು, ಶ್ರೀಮತಿ ಸಿ.ಎಸ್.ನಾಗಮಣಿ, ಪ್ರ.ದ.ಸ ಮತ್ತು ಶ್ರೀ ಬಿ.ಆರ್. ವಿಜಯ ಕುಮಾರ್, 'ಡಿ' ಗ್ರೂಪ್ ನೌಕರರು ಇವರುಗಳ ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು ಸದರಿ ನೌಕರರಿಗೆ ಪಿಂಚಣಿ ಸೌಲಭ್ಯಗಳನ್ನು ಪ್ರಾಧೀಕಾರದ ಸ್ವಂತ ಸಂಪನ್ಮೂಲದಿಂದಲೇ ಪ್ರಾಧೀಕರಿಸಲಾಗಿರುತ್ತದೆ. ಪಿಂಚಣಿ ಪ್ರಾಧೀಕರಣದಲ್ಲಿ ಕಂಡು ಬಂದಂತಹ ಪ್ರಮುಖ ನ್ಯೂನತೆಗಳು ಈ ಕೆಳಕಂಡಂತಿರುತ್ತದೆ.

1. ಪಿಂಚಣಿ ಸೌಲಭ್ಯವನ್ನು ಪ್ರಾಧಿಕರಿಸಿದ ಬಗ್ಗೆ ಅಧಿಕೃತವಾದ ಆದೇಶ ಹೊರಡಿಸಿರುವುದಿಲ್ಲ.
2. ಪಿಂಚಣಿ ಆದೇಶ ರಿಜಿಸ್ಟರ್‌ನ್ನು ನಿರ್ವಹಿಸದೇ ಇರುವುದರಿಂದ ರಿಜಿಸ್ಟರ್‌ನ್ನು ನಿರ್ವಹಿಸಿ ಪಿಂಚಣಿ ಸೌಲಭ್ಯವನ್ನು ಪ್ರಾಧಿಕರಿಸಿದ ಬಗ್ಗೆ ನಮೂದಿಸುವುದು.

19. ಸ್ಲಂ ಇಂಪ್ರೋಮೆಂಟ್ ಸೆಸ್ಸು ಸಂಗ್ರಹ ಮೊತ್ತವನ್ನು ಕೊಳಚೆ ನಿರ್ಮೂಲನೆ ಮಂಡಳಿಗೆ ಜಮಾ ಮಾಡದಿರುವುದು:–

ಸರ್ಕಾರದ ಆದೇಶದ ಸಂಖ್ಯೆ:ವನಿ180ಎಂ.ಐ.ಬಿ 1994 ದಿನಾಂಕ:29–3–1994ರಲ್ಲಿ ಸರ್ಕಾರವು ರಾಜ್ಯದಲ್ಲಿರುವ ಕೊಳಚೆ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಕೊಳಚೆ ಅಭಿವೃದ್ಧಿ ಕರವನ್ನು ನಿವೇಶನ ಹಂಚಿಕೆ ಸಮಯದಲ್ಲಿ, ಕಟ್ಟಡದ ನಕ್ಷೆ ಮಂಜೂರು ಮಾಡುವಾಗ ಹಾಗೂ ಖಾಸಗಿ ಬಡಾವಣೆಗಳನ್ನು ಅನುಮೋದಿಸುವಾಗ ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಗಳು, ಬೆಂ.ಅ.ಪ್ರಾ, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳು ನಿಗದಿತ ದರವನ್ನು ವಿಧಿಸಲು ಹಾಗೂ ಈ ರೀತಿ ಸಂಗ್ರಹಿಸಿದ ಹಣವನ್ನು ಪ್ರತ್ಯೇಕ ಸ್ಲಂ ಡೆವಲಪ್‌ಮೆಂಟ್ ಖಾತೆ ತೆರೆಯಲು ತಿಳಿಸಲಾಗಿದೆ. ಈ

ರೀತಿ ಸಂಗ್ರಹಿಸಿದ ಹಣದಲ್ಲಿ ಶೇಕಡ 10ರಷ್ಟನ್ನು ಆಡಳಿತ ವೆಚ್ಚವೆಂದು ಇಟ್ಟುಕೊಂಡು ಉಳಿದ ಹಣವನ್ನು ಕರ್ನಾಟಕ ಕೊಳಚೆ ನೈರ್ಮಲ್ಯ ಮಂಡಳಿಗೆ ವರ್ಗಾಯಿಸಲು ತಿಳಿಸಲಾಗಿತ್ತು.

ತದ ನಂತರ ಸರ್ಕಾರದ ಆದೇಶದ ಸಂಖ್ಯೆ:ನ.ಅ.ಇ.812 ಎಂ.ಡಿ.ಬಿ 1995 ದಿನಾಂಕ:15–6–1996ರಲ್ಲಿ ಮೇಲ್ಕಂಡ ಸರ್ಕಾರದ ಆದೇಶದಲ್ಲಿ ಸಂಗ್ರಹಿಸುವ ಸೆಸ್ಸನ್ನು ನಗರಾಭಿವೃದ್ಧಿ ಪ್ರಾಧಿಕಾರಗಳು ಬೆಂ.ಅ.ಪ್ರಾ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಇತರೆ ಸ್ಥಳೀಯ ಸಂಸ್ಥೆಗಳು ಶೇಕಡ 70ರಷ್ಟನ್ನು ಸಂಬಂಧಪಟ್ಟ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಸ್ಲಂ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಉಪಯೋಗಿಸಲು ಮತ್ತು ಉಳಿದ ಶೇಕಡ 30ರಷ್ಟ ಹಣವನ್ನು ಕರ್ನಾಟಕ ರಾಜ್ಯ ಕೊಳಚೆ ನಿರ್ಮೂಲನ ಮಂಡಳಿಗೆ ರಾಜ್ಯದಲ್ಲಿನ ಅಧಿಸೂಚಿತ ಪ್ರದೇಶದ ಅಭಿವೃದ್ಧಿಗಾಗಿ ಉಪಯೋಗಿಸಲು ತಿಳಿಸಲಾಗಿದೆ. ಸ್ಲಂ ಇಂಪ್ರೋವ್‌ಮೆಂಟ್ ಸೆಸ್ಸನ್ನು ಸಂಗ್ರಹಿಸುವ ಎಲ್ಲಾ ಪ್ರಾಧಿಕಾರಗಳು ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ ಮಾಡುವ ಜಮಾ ಹಾಗೂ ಖರ್ಚಿನ ವಿವರದ ಬಗ್ಗೆ ಪ್ರತ್ಯೇಕವಾಗಿ ಲೆಕ್ಕವನ್ನು ಇಡಲು ತಿಳಿಸಲಾಗಿದ ಈ ಸಂಸ್ಥೆಯಲ್ಲಿ ಸ್ಲಂ ಸೆಸ್ಸನ ಜಮಾ ಹಾಗೂ ಖರ್ಚಿನ ವಿವರವನ್ನು ಹಾಗೂ ನಿಧಿಯನ್ನು ಪ್ರತ್ಯೇಕ ಬ್ಯಾಂಕ್ ಖಾತೆಗಳಲ್ಲಿ ನಿರ್ವಹಿಸಲಾಗುತ್ತಿವೆ. 2017–18ನೇ ಸಾಲಿನಲ್ಲಿ ಈ ಸಂಸ್ಥೆಯು ಕೊಳಚೆ ಅಭಿವೃದ್ಧಿ ಕರ ರೂ.378718/–ಗಳನ್ನು ಸಂಗ್ರಹಿಸಿದ್ದು, ಇದರಲ್ಲಿ ಶೇಕಡ 30ರಷ್ಟು ಅಂದರೆ ರೂ.113615/–ಗಳನ್ನು ಶೇಕಡ 30ರ ನಿಧಿಯ ಖಾತೆಗೆ ಜಮಾ ಮಾಡಬೇಕಾಗಿತ್ತು. ಆದರೆ ಸದರಿ ಖಾತೆಗೆ ಮೇಲ್ಕಂಡ ಸಾಲಿನಲ್ಲಿ ರೂ.108527/–ಗಳನ್ನು ಜಮಾ ಮಾಡಿರುತ್ತಾರೆ. ಕೊಳಚೆ ಅಭಿವೃದ್ಧಿಕರ ಮೇಲ್ಕಂಡ ಸಾಲಿನಲ್ಲಿ ಕಡಿಮೆ ವರ್ಗಾಯಿಸಿರುವ ಹಣ ರೂ.5088/–ಗಳನ್ನು ಸದರಿ ಖಾತೆಗೆ ಜಮಾ ಮಾಡಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು.

20. ಸಾದಿಲ್ವಾರು ಪಾವತಿಯ ಬಿಲ್ಲುಗಳಲ್ಲಿ ಕಂಡುಬಂದಂತಹ ನ್ಯೂನತೆಗಳು:–

ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 2017–18ನೇ ಸಾಲಿನಲ್ಲಿ ಪಾವತಿಸಲಾದ ಸಾದಿಲ್ವಾರು ಬಿಲ್ಲುಗಳನ್ನು ಪರಿಶೀಲಿಸಿದಾಗ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. ಡಿ.ಸಿ. ಬಿಲ್ಲುಗಳಿಗೆ ನಂಬರ್, ಸಾಲು ಹಾಗೂ ದಿನಾಂಕ ನಮೂದಿಸಿರುವುದಿಲ್ಲ.
2. ಸಾದಿಲ್ವಾರು ಬಿಲ್ಲುಗಲನ್ನು ಪಾಸು ಮಾಡಿಕೊಂಡಿರುವುದಿಲ್ಲ
3. ಸಾದಿಲ್ವಾರು ಬಿಲ್ಲುಗಳನ್ನು ಪಾವತಿಸಿದ ನಂತರ ಓಚರ್‌ಗಳ ಮೇಲೆ ಪಾವತಿಸಿ ರದ್ದು ಪಡಿಸಿದ ಪೇಯಿಡ್ ಅಂಡ್ ಕ್ಯಾನ್ಸೆಲ್ ಸೀಲು ಹಾಕಿ ದೃಡೀಕರಿಸಿರುವುದಿಲ್ಲ.
4. ಸಾದಿಲ್ವಾರು ಬಿಲ್ಲುಗಳಿಗೆ ಕರ್ನಾಟಕ ಆರ್ಥಿಕ ಸಂಹಿತೆಯಲ್ಲಿ ತಿಳಿಸಿರುವಂತೆ ಅಗತ್ಯವಾದಂತಹ ದೃಢೀಕರಣ ಹಾಕಿಲ್ಲ.
5. ಪಾವತಿಯ ಬಿಲ್ಲುಗಳಲ್ಲಿ ಖರೀದಿಗೆ ಸಂಬಂಧಿಸಿದ ದಾಸ್ತಾನು ದೃಢೀಕರಣ ನಿರ್ವಹಣೆಗೆ ಸಂಬಂಧಿಸಿದಂತಹ ಬಿಲ್ಲುಗಳಲ್ಲಿ ಅಗತ್ಯವಾದಂತಹ ದೃಢೀಕರಣ ಹಾಕಿರುವುದಿಲ್ಲ.
6. ಮಾನವ ಸಂಪನ್ಮೂಲ ಒದಗಿಸಿದ ಮೇ॥ ಅರುಣ್ ಮ್ಯಾನ್ ಪವರ್ ಏಜೆನ್ಸಿ ಪಾವತಿಯ ಬಿಲ್ಲುಗಳಲ್ಲಿ ಆದಾಯ ತೆರಿಗೆ ಕಟಾಯಿಸಿರುವುದಿಲ್ಲ.

21. ಉಪಕರಗಳ ಬೇಡಿಕೆ ವಸೂಲಿ ಹಾಗೂ ಬಾಕಿಯ ವಿವರ :–

ನಗರಾಭಿವೃದ್ಧಿ ಪ್ರಾಧಿಕಾರದ ಕೆಂಚನಕಟ್ಟೆ ಹಂತ–1 ಹಾಗೂ ಹಂತ–2ರ ಬಡಾವಣೆಯ ಆಸ್ತಿ ಮಾಲೀಕರು 2017–18ನೇ ಸಾಲಿನಲ್ಲಿ ನಿವೇಶನಗಳ ಹಾಗೂ ಕಟ್ಟಡಗಳ ಸ್ವಯಂ ಘೋಷಿತ ಆಸ್ತಿ ತೆರಿಗೆ ಒಟ್ಟು ರೂ.8,00,809/–ಪಾವಸಿದ್ದು ಸದರಿ ಸ್ವಯಂ ಘೋಷಿತ ಆಸ್ತಿ ತೆರಿಗೆಯಲ್ಲಿ ಆರೋಗ್ಯಕರ ಶೇಕಡ 15, ಗ್ರಂಥಾಲಯಕರ ಶೇಕಡ 6, ಭಿಕ್ಷಕರ ಕರ ಶೇಕಡ 3 ಹಾಗೂ ನಗರ ಸಾರಿಗೆ ಕರ ಶೇಕಡ 2 ಸೇರಿರುತ್ತವೆ. 2017–18ನೇ ಸಾಲಿನಲ್ಲಿ ಈ ಸಂಸ್ಥೆಯು ಸಂಗ್ರಹಿಸಿರುವ ಉಪಕರಗಳ ವಿವರ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ವಿವರ	ಸಂಗ್ರಹಿಸಿರುವ ಮೊತ್ತ	ಶೇಕಡ10ರಷ್ಟು ಸೇವಾ ಶುಲ್ಕ	ಸರ್ಕಾರಕ್ಕೆ ಪಾವತಿಸ ಬೇಕಾಗಿರುವುದು
1	ಆರೋಗ್ಯಕರ	120121	12012	108109
2	ಗ್ರಂಥಾಲಯಕರ	48048	4805	43243
3	ಭಕ್ಷುಕರ ಕರ	24024	2402	21622
4	ನಗರ ಸಾರಿಗೆ ಕರ	16016	1602	14414

2017–18ನೇ ಸಾಲಿಗೆ ಈ ಸಂಸ್ಥೆಯ ಉಪಕರಗಳ ಸಂಗ್ರಹ ಪಾವತಿ ಹಾಗೂ ಬಾಕಿಯ ವಿವರ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ವಿವರ	ಆರೋಗ್ಯ ಕರ	ಗ್ರಂಥಾಲಯಕರ	ಭಿಕ್ಷುಕರ ಕರ	ನಗರ ಸಾರಿಗೆಕರ	ಒಟ್ಟು
1	1–4–2017ಕ್ಕೆ ಪ್ರಾರಂಭಿಕ ಶಿಲ್ಕು	149137	59655	29827	–	238619
2	2017–18ನೇ ಸಾಲಿನಲ್ಲಿ ಸಂಗ್ರಹಿಸಿದ ಮೊತ್ತ	108109	43243	21622	14414	187388
3	ಒಟ್ಟು	257246	102898	51449	14414	426007
4	2017–18ನೇ ಸಾಲಿನಲ್ಲಿ ಸರ್ಕಾರಕ್ಕೆ ಪಾವತಿಸಿರುವುದು	149137	59655	29827	–	238619
5	31–3–2018ಕ್ಕೆ ಉಳಿಕೆ	108109	43243	21622	14414	187388

ಬಾಕಿ ಉಳಿದಿರುವ ಉಪಕರಗಳನ್ನು ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು.

22. ಶಾಸನಬದ್ಧ ಕಟಾವಣೆಗಳನ್ನು ಸರ್ಕಾರಕ್ಕೆ ಜಮಾ ಮಾಡಿರುವ ವಿವರ:–

2017–18ನೇ ಸಾಲಿನಲ್ಲಿ ಈ ಸಂಸ್ಥೆಯಲ್ಲಿ ಪಾವತಿಸಲಾದ ಕಾಮಗಾರಿ ಬಿಲ್ಲುಗಳಲ್ಲಿ ಸಾಮಗ್ರಿ ಸರಬರಾಜು ಬಿಲ್ಲುಗಳಲ್ಲಿ ಸಿಬ್ಬಂದಿಯ ವೇತನದಲ್ಲಿ ಕಟಾಯಿಸಲಾದ ಆದಾಯ ತೆರಿಗೆ, ವ್ಯಾಟ್, ರಾಜಧನ, ಕಾರ್ಮಿಕರ ಕಲ್ಯಾಣ ಸುಂಕ, ಗುತ್ತಿಗೆದಾರರ ಕ್ಷೇಮನಿಧಿ ವೃತ್ತಿ ತೆರಿಗೆ ಕಟಾಯಿಸಿದ್ದು ಸದರಿ ಶಾಸನಬದ್ಧ ಕಟಾವಣೆಗಳನ್ನು ಸರ್ಕಾರಕ್ಕೆ ಜಮಾ ಮಾಡಿರುವ ವಿವರ ಹಾಗೂ ಉಳಿಕೆ ಕೆಳಕಂಡಂತೆ ಇರುತ್ತದೆ.

ವಿವರ	ಆದಾಯ ತೆರಿಗೆ	ವ್ಯಾಟ್	ರಾಜಧನ	ಕಾರ್ಮಿಕರ ಕಲ್ಯಾಣ ಸುಂಕ	ಗುತ್ತಿಗೆದಾರರ ಕ್ಷೇಮನಿಧಿ
1–4–2017ಕ್ಕೆ ಬಾಕಿ	–	–	–	–	–
2017–18ನೇ ಸಾಲಿಗೆ ಕಟಾವಣೆ ಮೊತ್ತ	177786	522001	281826	137815	14305
ಒಟ್ಟು	177786	522001	281826	137815	14305
2017–18ನೇ ಸಾಲಿನಲ್ಲಿ ಸರ್ಕಾರಕ್ಕೆ ಪಾವತಿ	177786	–	281826	137815	14305
31–3–2018ಕ್ಕೆ ಉಳಿಕೆ	–	522001	–	–	–

23. ಗುತ್ತಿಗೆ ಕರಾರು ಷರತ್ತು ಉಲ್ಲಂಘಿಸಿರುವ ಪ್ರಕರಣಗಳನ್ನು ಪತ್ತೆ ಹಚ್ಚಿ ದಂಡ ವಿಧಿಸದಿರುವುದು:–

ನಗರಾಭಿವೃದ್ಧಿ ಪ್ರಾಧಿಕಾರವು ಕೆಂಚನಕಟ್ಟೆ ಹಂತ–1ರಲ್ಲಿ 1994–95ನೇ ಸಾಲಿನಲ್ಲಿ 197 ನಿವೇಶನಗಳನ್ನು ಹಾಗೂ ಹಂತ–2ರಲ್ಲಿ 2002–03ನೇ ಸಾಲಿನಲ್ಲಿ 513 ನಿವೇಶನಗಳನ್ನು ರಚಿಸಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳು 1991ರ ಅನ್ವಯ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿ 1994–95ನೇ ಸಾಲಿನಲ್ಲಿ 197 ನಿವೇಶನಗಳು ಒಟ್ಟು 710 ನಿವೇಶನಗಳನ್ನು ಹಂಚಿಕೆ ಮಾಡಿ ಗುತ್ತಿಗೆ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಈ ಬಡಾವಣೆಯಲ್ಲಿ ಹಂಚಿಕೆಯಾದ 710 ನಿವೇಶನಗಳಲ್ಲಿ ಇದುವರೆವಿಗೆ ಸುಮಾರು 450 ವಾಸದ ಮನೆಗಳನ್ನು ನಿರ್ಮಿಸಿರುತ್ತಾರೆ. ಉಳಿದ 260 ನಿವೇಶನಗಳಲ್ಲಿ ಇದುವರೆವುಗೂ ವಾಸದ ಮನೆಗಳನ್ನು ನಿರ್ಮಿಸಿರುವುದಿಲ್ಲ, ಸದರಿ ನಿವೇಶನಗಳ ಗುತ್ತಿಗೆ ಕರಾರಿನ 10 ವರ್ಷದ ಅವಧಿ ಮುಗಿದಿರುತ್ತದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳು 1991ರ ನಿಯಮ 19ರ ಅನ್ವಯ ನಿವೇಶನ ಹಂಚಿಕೆದಾರ ಗುತ್ತಿಗೆ ಕರಾರು ಮಾಡಿಕೊಂಡ 5 ವರ್ಷದೊಳಗೆ ಪ್ರಾಧಿಕಾರ ದಿಂದ ನಕ್ಷೆ ಮಂಜೂರಾತಿ ಪಡೆದುಕೊಂಡು ಮನೆಯನ್ನು ನಿರ್ಮಾಣ ಮಾಡಬೇಕಾಗಿರುತ್ತದೆ. ಒಂದು ವೇಳೆ 5 ವರ್ಷದೊಳಗೆ ಮನೆ ನಿರ್ಮಿಸದಿದ್ದರೆ ಪ್ರಾಧಿಕಾರಕ್ಕೆ ಲಿಖಿತ ಮೂಲಕ ಸೂಕ್ತ ಕಾರಣ ನೀಡಿ ಕಾಲಾವಧಿಯನ್ನು ವಿಸ್ತರಣೆ ಪಡೆಯಬೇಕಾಗಿರುತ್ತದೆ. ಈ ಬಡಾವಣೆಯ ಸುಮಾರು 260 ಜನ ನಿವೇಶನ ಹಂಚಿಕೆದಾರರು ಮನೆಯನ್ನು ನಿರ್ಮಿಸಿರುವುದಿಲ್ಲ. ಪ್ರಾಧಿಕಾರದಿಂದ ಕಾಲ ವಿಸ್ತರಣೆಯನ್ನು ಪಡೆದುಕೊಂಡಿರುವುದಿಲ್ಲ. ಮೇಲ್ಕಂಡ ಬಡಾವಣೆಯ 260 ನಿವೇಶನ ಹಂಚಿಕೆದಾರರು ಗುತ್ತಿಗೆ ಕರಾರಿನ ಷರತ್ತು ಉಲ್ಲಂಘಿಸಿರುವುದರಿಂದ ಸದರಿ ನಿವೇಶನಗಳ ಹಂಚಿಕೆದಾರರಿಗೆ ನೋಟೀಸ್ ನೀಡಿ ಗುತ್ತಿಗೆ ಕರಾರನ್ನು ರದ್ದುಪಡಿಸಿ ನಿವೇಶನವನ್ನು ಪ್ರಾಧಿಕಾರದ ಸ್ವಾಧೀನಕ್ಕೆ ತಗೆದುಕೊಂಡು ನಿವೇಶನ ಮೌಲ್ಯದ ಶೇಕಡ 12. 1/2ರಷ್ಟು ಮುಟ್ಟುಗೋಲು ಹಾಕಿಕೊಂಡು ಉಳಿದ ಮೊತ್ತವನ್ನು ಷರತ್ತು ಉಲ್ಲಂಘಿಸಿದ ಹಂಚಿಕೆದಾರರಿಗೆ ಮರುಪಾವತಿಸಬೇಕಾಗಿರುತ್ತದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮಗಳು 1991ರ ನಿಯಮ 20ರ ಅನ್ವಯ ನಿವೇಶನ ಹಂಚಿಕೆದಾರ ಗುತ್ತಿಗೆ ಅವಧಿಯಲ್ಲಿ ಮನೆ ನಿರ್ಮಿಸಿ/ಮನೆ ನಿರ್ಮಿಸದೇ ನೇರ ಮಾರಾಟ ಮಾಡಿರುವ ಪ್ರಕರಣಗಳಲ್ಲಿ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿರುವ ನೊಂದಣಿ ಬೆಲೆಯ ಶೇಕಡ 50 ರಷ್ಟುದಂಡದ ಶುಲ್ಕವನ್ನು ಖರೀದಿದಾರರಿಂದ ಪಾವತಿಸಿಕೊಂಡು ಕ್ರಯ ಪತ್ರ ನೀಡಲು ಅವಕಾಶ ಇರುತ್ತದೆ.

ನಿವೇಶನ ಹಂಚಿಕೆದಾರ 10 ವರ್ಷದ ಗುತ್ತಿಗೆ ಅವಧಿ ಪೂರ್ಣಗೊಂಡ ನಂತರ ಮನೆಯನ್ನು ನಿರ್ಮಿಸಿ/ನಿರ್ಮಿಸದೇ ಕ್ರಯ ಪತ್ರ ಪಡೆಯದೇ ನೇರ ಮಾರಾಟ ಮಾಡಿರುವ ಪ್ರಕರಣಗಳಲ್ಲಿ ಸರ್ಕಾರವು ಕಾಲಕಾಲಕ್ಕೆ ನಿಗದಿಪಡಿಸಿರುವ ನೊಂದಣಿ ಬೆಲೆಯ ಶೇಕಡ 25ರಷ್ಟು ದಂಡದ ಶುಲ್ಕವನ್ನು ಖರೀದಿದಾರರಿಂದ ಪಾವತಿಸಿಕೊಂಡು ಕ್ರಯ ಪತ್ರ ನೀಡಲು ಅವಕಾಶ ಇರುತ್ತದೆ.

260 ನಿವೇಶನ ಹಂಚಿಕೆದಾರರು ಯಾವ ರೀತಿಯ ಷರತ್ತು ಉಲ್ಲಂಘನೆ ಮಾಡಿರುತ್ತಾರೆ ಎಂಬುದನ್ನು ಪತ್ತೆ ಹಚ್ಚಿ ಸದರಿ ಷರತ್ತು ಉಲ್ಲಂಘನೆಯ ರೀತ್ಯಾ ನಿವೇಶನಗಳ ಮಾಲೀಕರಿಗೆ ನೋಟೀಸ್ ನೀಡಿ ದಂಡ ವಿಧಿಸಿ ವಸೂಲಿಸಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು ಅಗತ್ಯವಾಗಿರುತ್ತದೆ.

24. ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿಯಲ್ಲಿ ಕಂಡು ಬಂದಂತಹ ನ್ಯೂನತೆಗಳು :–

ಪ್ರಾಧಿಕಾರದ ಕೆಂಚನಕಟ್ಟೆ ಹಂತ–1 ಹಾಗೂ ಹಂತ–2ರ ಬಡಾವಣೆಯ ನಿವೇಶನ ಹಾಗೂ ಕಟ್ಟಡಗಳ ಮಾಲೀಕರು ಆಸ್ತಿ ತೆರಿಗೆಯನ್ನು ವೈಶ್ಯಾ ಬ್ಯಾಂಕ್ ಹಾಗೂ ಇಂಡಿಯನ್ ಬ್ಯಾಂಕಿಗೆ ನೇರವಾಗಿ ಪಾವತಿಸುತ್ತಿರುತ್ತಾರೆ. ನಂತರ ಆಸ್ತಿ ತೆರಿಗೆ ಪಾವತಿದಾರರು ಆಸ್ತಿ ತೆರಿಗೆ ಪಾವತಿಸಿದ ಚಲನ್‌ನ 3ನೇ ಪ್ರತಿಯನ್ನು ಸ್ವಯಂ ಘೋಷಿತ ಆಸ್ತಿ ತೆರಿಗೆ ನಿರ್ಧರಣೆ ಅರ್ಜಿಯೊಂದಿಗೆ ಲಗತ್ತಿಸಿ ಪ್ರಾಧಿಕಾರಕ್ಕೆ ಸಲ್ಲಿಸುತ್ತಿದ್ದು ಸದರಿ ಚಲನ್ ಹಾಗೂ ಆಸ್ತಿ ತೆರಿಗೆ ನಿರ್ಧರಣೆ ಅರ್ಜಿಯನ್ನು ಪ್ರತಿ ಖಾತೆದಾರರ

ಫೈಲುಗಳಿಗೆ ಹಾಕುತ್ತಿರುವುದು ಕಂಡು ಬಂದಿರುತ್ತದೆ. ಪ್ರಾಧಿಕಾರದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿಯಲ್ಲಿ ಕೆಳಕಂಡ ನ್ಯೂನತೆಗಳನ್ನು ಗಮನಿಸಲಾಗಿದೆ.

1. ಸ್ವಯಂ ಆಸ್ತಿ ತೆರಿಗೆ ಘೋಷಣೆ ಮಾಡಿದ ಆಸ್ತಿ ತೆರಿಗೆ ಸರಿಯಾಗಿ ಲೆಕ್ಕಚಾರ ಮಾಡಲಾಗಿದೆಯೇ ಹಾಗೂ ಆಸ್ತಿ ತೆರಿಗೆ ದರ, ಸೆಸ್ಸುಗಳ ಮೊತ್ತ ಸರಿಯಾಗಿ ಲೆಕ್ಕಚಾರ ಮಾಡಲಾಗಿದೆಯೇ, ವಿಳಂಬ ಪಾವತಿಗೆ ದಂಡದ ಮೊತ್ತ ಸರಿಯಾಗಿದೆಯೇ ಹಾಗೂ ಚಲನ್‌ಗಳಲ್ಲಿ ನಮೂದಿಸಿರುವ ಮೊತ್ತ ಬ್ಯಾಂಕ್ ಪಾಸ್‌ಶೀಟ್‌ನೊಂದಿಗೆ ಜಮಾ ಬಂದಿದೆಯೇ ಎಂಬುದನ್ನು ಪರಿಶೀಲಿಸಿಲ್ಲ.
2. ಸ್ವಯಂ ಘೊಷಣೆ ಮಾಡಿ ಆಸ್ತಿ ತೆರಿಗೆ ಪಾವತಿಸಿದ ಶೇಕಡ 10ರಷ್ಟು ಅರ್ಜಿಗಳನ್ನು (ಅತಿ ಹೆಚ್ಚು ತೆರಿಗೆ ಪಾವತಿಸುವ) ಸ್ಥಾನಿಕವಾಗಿ ತಪಾಸಣೆ ಮಾಡಿ ಘೋಷಣೆ ಮಾಡಿದ ಆಸ್ತಿ ತೆರಿಗೆ ಸರಿಯಾಗಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಂಡಿಲ್ಲ ತಪ್ಪು ಆಸ್ತಿ ತೆರಿಗೆ ಘೋಷಣೆ ಮಾಡಿಕೊಂರುವ ಹಾಗೂ ಕಡಿಮೆ ತೆರಿಗೆ ಪಾವತಿಸುತ್ತಿರುವ ಖಾತೆದಾರರಿಗೆ ದಂಡ ವಿಧಿಸಿಲ್ಲ ಹಾಗೂ ಆಸ್ತಿ ತೆರಿಗೆ ಪರಿಷ್ಕರಣೆ ಮಾಡಿ ಪ್ರಾಧಿಕಾರ ನೋಟೀಸ್ ನೀಡಿಲ್ಲ
3. ಆಸ್ತಿ ತೆರಿಗೆ ಪ್ರಾಧಿಕಾರಕ್ಕೆ ಪಾವತಿಸದೇ ಇರುವ ಖಾತೆದಾರರಿಗೆ ನೋಟೀಸ್ ನೀಡಿಲ್ಲ.
4. ಆಸ್ತಿ ತೆರಿಗೆ ಪಾವತಿದಾರರು ತೆರಿಗೆ ತಡವಾಗಿ ಹಾಗೂ ಬಾಕಿ ಆಸ್ತಿ ತೆರಿಗೆ ಪಾವತಿಸಿದಾಗ ವಿಳಂಬದ ಅವಧಿಗೆ ಆಸ್ತಿ ತೆರಿಗೆಗೆ ದಂಡದ ಹಣ ಸ್ವಯಂ ಘೋಷಿತ ಅರ್ಜಿಯಲ್ಲಿ ಸೇರಿಸಲಾಗಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಂಡಿಲ್ಲ.
5. ಆಸ್ತಿ ತೆರಿಗೆಯನ್ನು ಕಾಲಕಾಲಕ್ಕೆ ತೆರಿಗೆ ಪರಿಷ್ಕರಿಸಿದ ರೀತಿಯಲ್ಲೇ ಆಸ್ತಿ ತೆರಿಗೆ ಲೆಕ್ಕಚಾರ ಮಾಡಿ ತೆರಿಗೆ ಪಾವತಿಸಲಾಗುತ್ತದೆ ಎಂಬುದನ್ನು ಖಾತ್ರಿಪಡಿಸಿಕೊಂಡಿಲ್ಲ.
6. ಪ್ರಾಧಿಕಾರವು ಆಸ್ತಿ ತೆರಿಗೆ ಪಾವತಿಯ ಕಛೇರಿಯ ಚಲನ್‌ಗಳನ್ನು ಬ್ಯಾಂಕಿನಿಂದ ಪ್ರತಿ ತಿಂಗಳು ತಗೆದುಕೊಂಡು ಬಂದಿಲ್ಲ. ಕಛೇರಿ ಪ್ರತಿಯ ಆಸ್ತಿ ತೆರಿಗೆ ಪಾವತಿಸಿದ ಚಲನ್‌ಗಳನ್ನು ಪ್ರತಿ ತಿಂಗಳು ಬ್ಯಾಂಕಿನಿಂದ ತಂದು ಸದರಿ ಚಲನ್‌ಗಳನ್ನು ಬ್ಯಾಂಕ್ ಪಾಸ್‌ಶೀಟ್‌ನೊಂದಿಗೆ ಪರಿಶೀಲಿಸಿ ಚಲನ್‌ನಲ್ಲಿ ನಮೂದಿಸಿದ ಮೊತ್ತ ಪಾಸ್‌ಶೀಟ್‌ನಲ್ಲಿ ಜಮಾ ಬಂದಿದೆಯೇ, ಇಲ್ಲವೆ ಎಂಬುದನ್ನು ಖಾತ್ರಿಪಡಿಸಿಕೊಂಡಿಲ್ಲ. ಚಲನ್‌ನಲ್ಲಿ ನಮೂದಿಸಿದ ಮೊತ್ತ ಬ್ಯಾಂಕ್ ಶೀಟ್‌ನಲ್ಲಿ ಕೈ ಬಿಟ್ಟು ಹೋಗಿದ್ದರೆ ಬ್ಯಾಂಕಿಗೆ ಪತ್ರ ಬರೆದು ಬಿಟ್ಟು ಹೋಗಿರುವ ಮೊತ್ತ ಪಾಸ್‌ಶೀಟ್‌ನಲ್ಲಿ ಜಮೆ ನೀಡುವಂತೆ ತಿಳಿಸಬೇಕಾಗಿರುತ್ತದೆ. ಆಸ್ತಿ ತೆರಿಗೆ ಪಾವತಿಸಿದ ಚಲನ್‌ಗಳನ್ನು ಬ್ಯಾಂಕ್ ಪಾಸ್‌ಶೀಟ್‌ನೊಂದಿಗೆ ಪರಿಶೀಲಿಸಿದ ನಂತರ (ಪ್ರಾಧಿಕಾರದ ನಿಧಿಗೆ ಜಮೆಯಾದ ಚಲನ್‌ಗಳನ್ನು) ದಿನಾಂಕವಾರು ಚಲನ್ ನಂಬರ್‌ವಾರು ಕಂಪ್ಯೂಟರಿಗೆ ದಾಖಲಿಸಿ ಆಸ್ತಿ ತೆರಿಗೆ, ಆರೋಗ್ಯಕರ, ಗ್ರಂಥಾಲಯ ಕರ, ಭಿಕ್ಷುಕರ ಕರ ನಗರಸಾರಿಗೆ ಕರ ದಂಡ ಇತ್ಯಾದಿಗಳನ್ನು ಪ್ರತ್ಯೇಕವಾಗಿ ವರ್ಗೀಕರಿಸಿಕೊಂಡು ಜಮೆಗಳ ದಿನವಾರು, ಮಾಸಿಕವಾರು ಲೆಕ್ಕವನ್ನು ತಯಾರಿಸಿರುವುದಿಲ್ಲ.

   ಮೇಲ್ಕಂಡ ನ್ಯೂನತೆಗಳ ನಿವಾರಣೆಗೆ ಪ್ರಾಧಿಕಾರದ ಆಡಳಿತ ವರ್ಗ ಕೂಡಲೇ ಕ್ರಮ ವಹಿಸುವುದು ಅಗತ್ಯವಾಗಿರುತ್ತದೆ.

25. ಆಸ್ತಿ ತೆರಿಗೆ ವಸೂಲಿಯ ತಗಾದೆ ವಹಿಯನ್ನು ನಿರ್ವಹಿಸದಿರುವುದು :-

ನಗರಾಭಿವೃದ್ಧಿ ಪ್ರಾಧೀಕಾರವು ಕೆಂಚನಕಟ್ಟೆ ಹಂತ-1ರಲ್ಲಿ 1994-95ನೇ ಸಾಲಿನಲ್ಲಿ 197 ನಿವೇಶನಗಳನ್ನು ಹಾಗೂ ಹಂತ-2ರಲ್ಲಿ 2002-03ನೇ ಸಾಲಿನಲ್ಲಿ 513 ನಿವೇಶನ ಒಟ್ಟು 710 ನಿವೇಶನಗಳನ್ನು ರಚಿಸಿ ಕರ್ನಾಟಕ ನಗರಾಭಿವೃದ್ಧಿ ಪ್ರಾದಿಕಾರ (ನಿವೇಶನಗಳ ಹಂಚಿಕೆ) ನಿಯಮಗಳು 1991ರ ಅನ್ವಯ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿ 1994-95 ಹಾಗೂ 2002-03ನೇ ಸಾಲಿನಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿರುತ್ತಾರೆ. ಈ ಬಡಾವಣೆಯಲ್ಲಿ ಸುಮಾರು 450 ಮನೆಗಳನ್ನು ನಿರ್ಮಿಸಿದ್ದು ಸದರಿ ಬಡಾವಣೆಯನ್ನು ಪ್ರಾಧಿಕಾರದೇ ನಿರ್ವಹಣೆ ಮಾಡುತ್ತಿದೆ. ಸದರಿ ಬಡಾವಣೆಯ ನಿವೇಶನಗಳ ಹಾಗೂ ಕಟ್ಟಡಗಳ ಮಾಲೀಕರು ಆಸ್ತಿ ತೆರಿಗೆಯನ್ನು ಸ್ವಯಂ ಘೋಷಣೆ ಆಸ್ತಿ

ತೆರಿಗೆಯನ್ನು ಪ್ರಾಧಿಕಾರಕ್ಕೆ ಪ್ರತಿ ವರ್ಷ ಪಾವತಿಸುತ್ತಾರೆ. ಆದರೆ ಪ್ರಾಧಿಕಾರದಲ್ಲಿ ಆಸ್ತಿ ತೆರಿಗೆ ತಗಾದೆ ವಹಿಯನ್ನು ಇದುವರೆವಿಗೂ ನಿರ್ವಹಿಸಿರುವುದಿಲ್ಲ ಈ ಬಡಾವಣೆಯ ಆಸ್ತಿ ಮಾಲೀಕರು 1994–95ನೇ ಸಾಲಿನಿಂದ ಆಸ್ತಿ ತೆರಿಗೆ ಪಾವತಿಸುತ್ತಿದ್ದರೂ ಸಹಾ ಆಸ್ತಿ ತೆರಿಗೆ ತಗಾದೆ ವಹಿಯನ್ನು ನಿರ್ವಹಿಸದೇ ಇರುವುದರಿಂದ ಪ್ರತಿ ವರ್ಷ ಆಸ್ತಿ ತೆರಿಗೆ ಪಾವತಿಸಿದವರ ಆಸ್ತಿಗಳ ಸಂಖ್ಯೆ ಹಾಗೂ ಆಸ್ತಿ ತೆರಿಗೆ ಪಾವತಿಸದೇ ಇರುವ ಆಸ್ತಿಗಳ ಸಂಖ್ಯೆ ಹಾಗೂ ಆಸ್ತಿ ತೆರಿಗೆ ಪಾವತಿಸಬೇಕಾದ ಮೊತ್ತ ಹಾಗೂಬಾಕಿ ಮೊತ್ತದ ವಿವರ ಪ್ರಾಧಿಕಾರದಲ್ಲಿ ಲಭ್ಯವಿರುವುದಿಲ್ಲ. ಆಸ್ತಿ ತೆರಿಗೆ ಪ್ರಾಧಿಕಾರದ ಆದಾಯದ ಪ್ರಮುಖ ಮೂಲಗಳಲ್ಲಿ ಒಂದು ಇಂತಹ ಮುಖ್ಯವಾದ್ದಂತಹ ಆದಾಯವನ್ನು ಕಡೆಗಣಿಸುವುದು ತರವಲ್ಲ ಪ್ರಾಧೀಕಾರವು ಕೂಡಲೇ ಆಸ್ತಿ ತೆರಿಗೆ ತಗಾದೆ ವಹಿಯನ್ನು ನಿರ್ವಹಿಸಲು ತುರ್ತಾಗಿ ಸೂಕ್ತ ಕ್ರಮ ವಹಿಸುವುದು ಸೂಕ್ತ.

26. ನೆಹರು ಯುವ ಕೇಂದ್ರದ ಬಾಡಿಗೆ ಪಾವತಿಯಲ್ಲಿ ಕಂಡುಬಂದಂತಹ ನ್ಯೂನತೆಗಳು :–

ಬಾಡಿಗೆ ವಸೂಲಿಯ ತಗಾದೆ ವಹಿಯನ್ನು ಪರಿಶೀಲಿಸಲಾಗಿ ಪ್ರಾಧಿಕಾರದ ಕಛೇರಿಯ ಆವರಣದಲ್ಲಿರುವ ಹಾಗೂ ಪ್ರಾಧಿಕಾರದ ಕಛೇರಿಯ ಕಟ್ಟಡಕ್ಕೆ ಹೊಂದಿಕೊಂಡಿರುವಂತ ಒಂದು ಭಾಗವನ್ನು ನೆಹರು ಯುವ ಕೇಂದ್ರದ ಕಛೇರಿಗೆ ಮಾಸಿಕ ಬಾಡಿಗೆ ಆದಾರದ ಮೇಲೆ ನೀಡಲಾಗಿರುತ್ತದೆ. ತಗಾದೆ ವಹಿಯ ಪ್ರಕಾರ 2006–07ನೇ ಸಾಲಿನಿಂದ ಸದರಿ ಕಛೇರಿಯ ಕಟ್ಟಡದ ಬಾಡಿಗೆಯನ್ನು ಮಾಸಿಕ ರೂ.1500/–ರಂತೆ ವಸೂಲಿ ಮಾಡಲಾಗುತ್ತಿದೆ. ತದನಂತರ ದಿನಾಂಕ:1–4–2008 ರಿಂದ ಸದರಿ ಕಟ್ಟಡದ ಬಾಡಿಗೆಯನ್ನು ಮಾಸಿಕ ರೂ.3000/–ರಂತೆ ವಸೂಲಿ ಮಾಡಲಾಗುತ್ತಿದೆ. ನೆಹರು ಯುವ ಕೇಂದ್ರದ ಕಛೇರಿಯ ಮಾಸಿಕ ಬಾಡಿಗೆ ವಸೂಲಿಯಲ್ಲಿ ಕೆಳಕಂಡ ನ್ಯೂನತೆಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ.

1. ನೆಹರು ಯುವ ಕೇಂದ್ರದ ಕಛೇರಿಗೆ ಮಾಸಿಕ ಬಾಡಿಗೆ ನೀಡಿರುವುದಕ್ಕೆ ಸದರಿ ಸಂಸ್ಥೆಯಿಂದ ಗುತ್ತಿಗೆ ಕರಾರು: ಬಾಡಿಗೆ ಕರಾರನ್ನು ಪ್ರಾಧಿಕಾರ ಪಡೆದುಕೊಂಡಿಲ್ಲ.
2. ನೆಹರು ಯುವ ಕೇಂದ್ರದಿಂದ 2008–09ನೇ ಸಾಲಿನಿಂದ ಮಾಸಿಕ ರೂ.3000/–ರಂತೆ ಬಾಡಿಗೆ ವಸೂಲಿ ಮಾಡುತ್ತಿದ್ದು ಕಳೆದ 10 ವರ್ಷಗಳಿಂದ ಬಾಡಿಗೆ ಪರಿಷ್ಕರಣೆ ಮಾಡಿರುವುದಿಲ್ಲ.
3. ನೆಹರು ಯುವ ಕೇಂದ್ರದ ಕಛೇರಿಯು ಪ್ರಾಧಿಕಾರದ ಒಂದು ಭಾಗದಲೇ ಇರುವುದರಿಂದ ಸದರಿ ಕಛೇರಿಯ ಮಾಸಿಕ ವಿದ್ಯುತ್ ಶುಲ್ಕ ಹಾಗೂ ನೀರಿನ ಚಾರ್ಜ್‌ನ್ನು ಪ್ರಾಧಿಕಾರವೇ ಭರಿಸಲಾಗುತ್ತಿದೆ. ಸದರಿ ಕಛೇರಿಗೆ ಮಾಸಿಕ ವಿದ್ಯುತ್ ಶುಲ್ಕ ಹಾಗೂ ನೀರಿನ ಚಾರ್ಜ್‌ಸ್‌ನ್ನು ಪ್ರಾಧಿಕಾರ ನಿಗದಿಪಡಿಸಿ ಬಾಕಿ ಸಮೇತ ವಸೂಲಿಸುವುದು.
4. ಬಾಡಿಗೆಯನ್ನು ಪ್ರತಿ ತಿಂಗಳು ಸಕಾಲಕ್ಕೆ ಪ್ರಾಧಿಕಾರಕ್ಕೆ ಪಾವತಿಸದೇ ಇರುವುದರಿಂದ ತಡವಾಗಿ ಬಾಡಿಗೆ ಪಾವತಿಸಿರುವುದಕ್ಕೆ ಪ್ರಾಧಿಕಾರ ಯಾವುದೇ ದಂಡ ವಿಧಿಸಿರುವುದಿಲ್ಲ.

ಮೇಲ್ಕಂಡ ನ್ಯೂನತೆಗಳ ನಿವಾರಣೆಗೆ ಪ್ರಾಧಿಕಾರದ ಆಡಳಿತ ವರ್ಗ ಕ್ರಮ ತೆಗೆದುಕೊಳ್ಳುವುದು ಸದರಿ ಸಂಸ್ಥೆಯ 2017–18ನೇ ಸಾಲಿಗೆ ಬಾಡಿಗೆಯ ಬೇಡಿಕೆ ವಸೂಲಿ ಹಾಗೂ ಉಳಿಕೆಯ ವಿವರ ಕೆಳಕಂಡಂತೆ ಇರುತ್ತದೆ.

01–04–2017ಕ್ಕೆ ಬಾಕಿ	6000
2017–18ನೇ ಸಾಲಿಗೆ ಬಾಡಿಗೆ ತಗಾದೆ	36000
ಒಟ್ಟು	42000
2017–18ನೇ ಸಾಲಿಗೆ ವಸೂಲಿ	33000
31–03–2018ಕ್ಕೆ ಉಳಿಕೆ	9000

ಬಾಕಿ ಇರುವ ಬಾಡಿಗೆಯನ್ನು ವಸೂಲಿಸಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ತೆಗೆದುಕೊಳ್ಳುವುದು ಅಗತ್ಯವಾಗಿರುತ್ತದೆ.

27. ಪ್ರಾಧಿಕಾರದ ವಸತಿ ಬಡಾವಣೆ ಕೆಂಚನಕಟ್ಟೆ ಹಂತ–1 ಹಾಗೂ ಹಂತ–2ರ ವ್ಯಾಪ್ತಿಯಲ್ಲಿ ಬರುವ ಟ್ರೇಡ್ ಲೈಸೆನ್ಸ್ ಫೀ ಜಾಹೀರಾತು ತೆರಿಗೆ ಹಾಗೂ ಮೊಬೈಲ್ ಟವರ್‌ಗಳಿಗೆ ತೆರಿಗೆ ವಿಧಿಸಿ ವಸೂಲಿಸದಿರುವುದು

ಪ್ರಾಧಿಕಾರ ರಚಿಸಿರುವ ವಸತಿ ಬಡಾವಣೆ ಕೆಂಚನಕಟ್ಟೆ ಹಂತ–1 ಹಾಗೂ ಹಂತ–2ರಲ್ಲಿ 260 ಖಾಲಿ ನಿವೇಶಗಳು ಹಾಗೂ 450 ಮನೆಗಳ ಸದರಿ ಬಡಾವಣೆಯಲ್ಲಿದ್ದು ಸದರಿ ಬಡಾವಣೆಯ ಆಸ್ತಿ ಮಾಲೀಕರು ಪ್ರತಿ ವರ್ಷ ಪ್ರಾಧಿಕಾರಕ್ಕೆ ಆಸ್ತಿ ತೆರಿಗೆ ಪಾವತಿಸುತ್ತಿದ್ದಾರೆ ಆದರೆ ಸದರಿ ಬಡಾವಣೆಯ ವ್ಯಾಪ್ತಿಯಲ್ಲಿ ಕಿರಾಣಿ ಅಂಗಡಿ, ಬೇಕರಿ ಇತರೆ ವಾಣಿಜ್ಯ ವಹಿವಾಟು ನಡೆಸುವ ಮಾಲೀಕರಿಂದ ಟ್ರೇಡ್ ಲೈಸೆನ್ಸ್ ಶುಲ್ಕವನ್ನು ವಸೂಲಿ ಮಾಡುತಿಲ್ಲ ಹಾಗೂ ಇದೇ ರೀತಿ ಈ ಬಡಾವಣೆಯಲ್ಲಿ ಜಾಹೀರಾತು ಫಲಗಳನ್ನು ಪ್ರದರ್ಶಿಸಿದ್ದಾರೆ (ಕೇಂದ್ರ ಹಾಗೂ ರಾಜ್ಯ ಸರ್ಕಾರದ ಜಾಹೀರಾತುಗಳನ್ನು ಹೊರತುಪಡಿಸಿ) ಸದರಿ ಜಾಹೀರಾತುಗಳ ಮೇಲೆ ಜಾಹೀರಾತು ತೆರಿಗೆಯನ್ನು ವಿಧಿಸಿ ಪ್ರಾಧಿಕಾರ ವಸೂಲಿ ಮಾಡುತ್ತಿಲ್ಲ ಈ ಬಡಾವಣೆಯಲ್ಲಿ ಖಾಲಿ ನಿವೇಶನ ಮನೆಗಳ ಮೇಲೆ ಪ್ರಾಧಿಕಾರದ ಜಾಗದಲ್ಲಿ ಮೊಬೈಲ್ ಟವರುಗಳಿದ್ದರೆ ಮೊಬೈಲ್ ಟವರುಗಳಿಗೆ ತೆರಿಗೆ ವಿಧಿಸಿ ವಸೂಲಿಸಲು ಅವಕಾಶ ಇರುತ್ತದೆ.

ಈ ಹಿನ್ನಲೆಯಲ್ಲಿ ಪ್ರಾಧಿಕಾರದ ವಸತಿ ಬಡಾವಣೆಯಲ್ಲಿ ಬರುವ ವಾಣಿಜ್ಯ ವಹಿವಾಟಿಗೆ ಟ್ರೇಡ್ ಲೈಸೆನ್ಸ್ ಫೀ, ಜಾಹೀರಾತು ಫಲಕಗಳ ಮೇಲೆ ಜಾಹೀರಾತು ತೆರಿಗೆ ಹಾಗೂ ಮೊಬೈಲ್ ಟವರುಗಳಿಗೆ ತೆರಿಗೆ ವಿಧಿಸಿ ವಸೂಲಿಸುವ ಮೂಲಕ ಪ್ರಾಧಿಕಾರದ ಆದಾಯ ಕ್ರೋಢೀಕರಣಕ್ಕೆ ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು ಅಗತ್ಯವಾಗಿರುತ್ತದೆ.

28. ಶ್ರೀಮತಿ. ಸಿ. ಎಸ್. ನಾಗಮಣಿ, ನಿವೃತ್ತ ಪ್ರ.ದ.ಸಹಾಯಕಿ ಇವರ ವೇತನ ತಪ್ಪಾಗಿ ನಿಗದಿಪಡಿಸಿರುವುದರಿಂದ ವಯೋ ನಿವೃತ್ತ ಪಿಂಚಣಿ ಸೌಲಭ್ಯಗಳನ್ನು ಹೆಚ್ಚಿಗೆ ಪ್ರಾಧೀಕರಿಸಿ ಪಾವತಿಸಿರುವುದು:–

ಶ್ರೀಮತಿ. ಸಿ.ಎಸ್. ನಾಗಮಣಿ, ನಿವೃತ್ತ ಪ್ರ.ದ.ಸಹಾಯಕಿ ಇವರ ಸೇವಾವಹಿಯನ್ನು ಹಾಗೂ ವಯೋ ನಿವೃತ್ತ ಪಿಂಚಣಿ ಸೌಲಭ್ಯಗಳನ್ನು ಪ್ರಾಧೀಕರಿಸಿರುವ ಕಡತ ಪರಿಶೀಲಸಲಾಗಿ ಶ್ರೀಮತಿಯವರಿಗೆ 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ವೇತನವನ್ನು ತಪ್ಪಾಗಿ ನಿಗದಿಪಡಿಸಿದರ ಪರಿಣಾಮ ವಯೋ ನಿವೃತ್ತ ಪಿಂಚಣಿ ಸೌಲಭ್ಯಗಳನ್ನು ಹೆಚ್ಚಿಗೆ ಪ್ರಾಧೀಕರಿಸಿ ಪಾವತಿಸಿರುವುದು ಕಂಡು ಬಂದಿರುತ್ತದೆ. ಶ್ರೀಮತಿ ಸಿ.ಎಸ್.ನಾಗಮಣಿ, ನಿವೃತ್ತ ಪ್ರ.ದ.ಸ ಇವರ ವೇತನವನ್ನು ನಿಯಮಾವಳಿಯ ರೀತ್ಯಾ ಕೆಳಕಂಡಂತೆ ನಿಗದಿಪಡಿಸಬೇಕಾಗಿರುತ್ತದೆ.

ನಿಯಮಾವಳಿಯ ಪ್ರಕಾರ ವೇತನ ನಿಗದಿಪಡಿಸಬೇಕಾಗಿರುವುದು			ಸೇವಾವಹಿಯ ಪ್ರಕಾರ ವೇತನ ನಿಗದಿ		
ದಿನಾಂಕ	**ವೇತನ**	**ವೇತನ ಶ್ರೇಣಿ**	**ದಿನಾಂಕ**	**ವೇತನ**	**ವೇತನ ಶ್ರೇಣಿ**
01–8–2016	28100	17650–32000	1–8–2016	28100	17650–32000
16–8–2016	28800	25 ವರ್ಷದ ಹೆಚ್ಚುವರಿ ವೇತನ ಬಡ್ತಿ	16–8–2016	28800	25 ವರ್ಷದ ಹೆಚ್ಚುವರಿ ವೇತನ ಬಡ್ತಿ
01–7–2017	51400	2018ರ ಪರಿಷ್ಕೃತ ವೇತನ ಶ್ರೇಣಿ ರೂ.33450–62600 ರಲ್ಲಿ ವೇತನ ನಿಗದಿ ಆರ್ಥಿಕ ಸೌಲಭ್ಯ ದಿನಾಂಕ:1–4–2018 ರಿಂದ	1–7–2017	52650	2018ರ ಪರಿಷ್ಕೃತ ವೇತನ ಶ್ರೇಣಿ ರೂ.33450–62600 ರಲ್ಲಿ ವೇತನ ನಿಗದಿ ಆರ್ಥಿಕ ಸೌಲಭ್ಯ ದಿನಾಂಕ:1–4–2018 ರಿಂದ
01–8–2017	52650	ವಾರ್ಷಿಕ ವೇತನ ಬಡ್ತಿ	1–8–2017	53900	ವಾರ್ಷಿಕ ವೇತನ ಬಡ್ತಿ
31–5–2018	52650	ಸ್ವಯಂ ನಿವೃತ್ತಿ ಹೊಂದಿರುತ್ತಾರೆ.	31–5–2018	53900	ಸ್ವಯಂ ನಿವೃತ್ತಿ ಹೊಂದಿರುತ್ತಾರೆ.

ಶ್ರೀಮತಿಯವರಿಗೆ ದಿ:1–4–2018 ರಿಂದ 31–5–2018ರವರೆಗೆ ವೇತನ ತಪ್ಪಾಗಿ ನಿಗದಿ ಪಡಿಸಿರುವುದರಿಂದ ಮೇಲ್ಕಂಡ ಅವಧಿಗೆ ಒಟ್ಟು ರೂ.2700/–ಹೆಚ್ಚುವರಿ ವೇತನ ಪಾವತಿಯಾಗಿರುತ್ತದೆ.

ಶ್ರೀಮತಿಯವರಿಗೆ ನಿಯಮಾವಳಿಯ ರೀತ್ಯಾ ಪ್ರಾಧೀಕರಿಸಬೇಕಾಗಿರುವ ಪಿಂಚಣಿ ಸೌಲಭ್ಯಗಳ ವಿವರ ಕೆಳಕಂಡಂತೆ ಲೆಕ್ಕಚಾರ ಮಾಡಲಾಗಿದೆ.

ಜನ್ಮ ದಿನಾಂಕ	19–7–1958
ಸ್ವಯಂ ನಿವೃತ್ತಿ ಪಡೆದುಕೊಂಡ ದಿನಾಂಕ	31–5–2018
ಸೇವೆಗೆ ಸೇರಿದ ದಿನಾಂಕ	16–8–1991
ಒಟ್ಟು ಸೇವೆ	15–9–26
ಕೆ.ಸಿ.ಎಸ್.ಆರ್ ನಿಯಮ 285(ಎ)ರ ಪ್ರಕಾರ	00–02–00
ಒಟ್ಟು ನಿವ್ವಳ ಸೇವೆ	15–11–26

ನಿಯಮಾವಳಿಯ ಪ್ರಕಾರ ಅಂತಿಮ ವೇತನ ರೂ.52650/–

ನಿಯಮಾವಳಿಯ ಪ್ರಕಾರ ಪ್ರಾಧೀಕರಿಸಬೇಕಾದ ಪಿಂಚಣಿ ಸೌಲಭ್ಯಗಳು	**ಪಾವತಿಸಿರುವ ಪಿಂಚಣಿ ಸೌಲಭ್ಯಗಳು**	**ಹೆಚ್ಚುವರಿ ಪಾವತಿ**
1. ನಿವೃತ್ತಿ ವೇತನ:– 52650*54 ರೂ.21539 2*66	**1. ನಿವೃತ್ತಿ ವೇತನ:–** 53900*53 ರೂ.21642 2*66	103
2. ನಿವೃತ್ತ ಉಪದಾನ:– 52650*54 ರೂ.710775 4	**2. ನಿವೃತ್ತ ಉಪದಾನ:–** 53900*53 ರೂ.714175 4	3400
3. ಪರಿವರ್ತಿತ ಪಿಂಚಣಿ:– 7179*9.81*12 ರೂ.845112	**3. ಪರಿವರ್ತಿತ ಪಿಂಚಣಿ:–** 7214*10.13*12 ರೂ.876934	31822
4. ಕುಟುಂಬ ಪಿಂಚಣಿ:– 52650*30 ರೂ.15795 100	**4. ಕುಟುಂಬ ಪಿಂಚಣಿ:–** 21642*30 ರೂ.6492 100	ಕುಟುಂಬ ಪಿಂಚಣಿ ಕಡಿಮೆ ಪ್ರಾಧಿಕರಿಸಿರುತ್ತಾರೆ
5. ನಿವೃತ್ತ ಪೂರ್ವ ಗಳಿಕೆ ರಜೆ ನಗದೀಕರಣ:– 52650*297 ರೂ.521235 30	**5. ನಿವೃತ್ತ ಪೂರ್ವ ಗಳಿಕೆ ರಜೆ ನಗದೀಕರಣ:–** 53900*297 ರೂ.533610 30	12375
	ಒಟ್ಟು	**47597**

ಶ್ರೀಮತಿಯವರ ವೇತನವನ್ನು ನಿಯಮಾವಳಿಯ ರೀತ್ಯಾ ಪುನರ್ ನಿಗದಿಪಡಿಸಿಕೊಂಡು ನಂತರ ನಿಯಮಾವಳಿಯ ರೀತ್ಯಾ ಪಿಂಚಣಿ ಸೌಲಭ್ಯಗಳನ್ನು ಪರಿಷ್ಕರಿಸಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು ಹಾಗೂ ಶ್ರೀಮತಿಯವರಿಗೆ ದಿನಾಂಕ:1–4–2018 ರಿಂದ 31–5–2018ರ ವರೆಗೆ ಪಾವತಿಸಲಾದ ಹೆಚ್ಚುವರಿ ವೇತನ ರೂ.2700/– ನಿವೃತ್ತಿ ಉಪದಾನ ರೂ.3400/– ಪರಿವರ್ತಿತ ಪಿಂಚಣಿ ರೂ.31822/– ಹಾಗೂ ನಿವೃತ್ತ ಪೂರ್ವ ಇರುವ ಗಳಿಕೆ ರಜೆ ನಗಧೀಕರಣ ರೂ.12375/– ಒಟ್ಟು ರೂ.50297/–ಗಳನ್ನು ಸಂಬಂಧಿಸಿದವರಿಂದ ನಿಯಮಾವಳಿಯ ರೀತ್ಯಾ ವಸೂಲಿಸಲು ಪ್ರಾಧೀಕಾರದ ಆಡಳಿತ ವರ್ಗ ಕ್ರಮ ವಹಿಸುವುದು.

ಶ್ರೀಮತಿಯವರು ನಗರ ಯೋಜನಾಮಂಡಳಿಯಲ್ಲಿ ವರ್ಗಾವಣೆಯ ಮೇರೆಗೆ ನಿಯೋಜನೆ ಮೇಲೆ ಸಲ್ಲಿಸಿದ ಅವಧಿ ದಿನಾಂಕ:1–6–1995 ರಿಂದ 31–3–2014ರ ವರೆಗೆ ಪಿಂಚಣಿ ವಂತಿಕೆ ರೂ.388434/–ಗಳನ್ನು ಸರ್ಕಾರಕ್ಕೆ ಪಾವತಿಸಿರುತ್ತಾರೆ. ನಗರಾಭಿವೃದ್ಧಿ ಪ್ರಾಧಿಕಾರವೇ ತನ್ನ ಸ್ವಂತ ಸಂಪನ್ಮೂಲದ ಆದಾಯದಿಂದ ಪ್ರಾಧಿಕಾರದ ನಿವೃತ್ತ ನೌಕರರಿಗೆ ಪಿಂಚಣಿ ಪಾವತಿಸುತ್ತಿರುವುದರಿಂದ ಪ್ರಾಧಿಕಾರಕ್ಕೆ ಪಾವತಿಸಬೇಕಾದ ಪಿಂಚಣಿ ವಂತಿಕೆ ಸರ್ಕಾರಕ್ಕೆ ಪಾವತಿಸಿರುವುದರಿಂದ ಸದರಿ ಮೊತ್ತ ಸರ್ಕಾರದಿಂದ ವಾಪಸ್ಸುಪಡೆದು ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗಕ್ಕೆ ಸಲ್ಲಿಸುವಂತೆ ನಗರಯೋಜನಾ ಮಂಡಳಿಗೆ ಪತ್ರ ಬರೆದು ವಾಪಸ್ಸುತರಿಸಿಕೊಳ್ಳುವುದು. ಶ್ರೀಮತಿಯವರು ದಿ:1–4–2014 ರಿಂದ 31–3–2017ರವರೆಗೆ ನಗರ ಯೋಜನಾಮಂಡಳಿಯಲ್ಲಿ ಅನ್ಯ ಸೇವೆಯ ಮೇಲೆ

ಸಲ್ಲಿಸಿದ ಅವಧಿಗೆ ಪಿಂಚಣಿ ವಂತಿಕೆ ರೂ.108486/–ಗಳನ್ನು ನಗರ ಯೋಜನಾ ಮಂಡಳಿಯಿಂದ ವಸೂಲಿಸಿ ಪ್ರಾಧಿಕಾರದ ಪಿಂಚಣಿ ನಿಧಿಗೆ ಜಮಾ ಮಾಡಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು.

29. ಶ್ರೀ. ಎಸ್. ಶಿವಾನಂದ ಸ್ವಾಮಿ ನಿವೃತ್ತ ನಗರ ಯೋಜನಾ ಸಹಾಯಕ ನಿರ್ದೇಶಕರು ಇವರ ವೇತನ ತಪ್ಪಾಗಿ ನಿಗದಿಪಡಿಸಿದ ಪ್ರಯುಕ್ತ ವೇತನ ಭತ್ಯೆ ಹಾಗೂ ವಯೋ ನಿವೃತ್ತ ಪಿಂಚಣಿ ಸೌಲಭ್ಯಗಳನ್ನು ಹೆಚ್ಚಿಗೆ ಪ್ರಾಧಿಕಾರಿಸಿ ಪಾವತಿಸಿರುವುದು:–

ಶ್ರೀ. ಎಸ್. ಶಿವಾನಂದಸ್ವಾಮಿ, ನಿವೃತ್ತ ನಗರ ಯೋಜನಾ ಸಹಾಯಕ ನಿರ್ದೇಶಕರು ದಿನಾಂಕ:16–8–1991ರಂದು ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅನುರೇಖಾ ಹುದ್ದೆಗೆ ವೇತನ ಶ್ರೇಣಿ ರೂ.1040–1900ರಲ್ಲಿ ನೇಮಕಾತಿಗೊಂಡಿರುತ್ತಾರೆ. ನಂತರ ಶ್ರೀಯುತರಿಗೆ ದಿನಾಂಕ:19–2–2004 ರಂದು ನಗರ ಯೋಜನಾ ಸಹಾಯಕರ ಹುದ್ದೆಗೆ ವೇತನ ಶ್ರೇಣಿ ರೂ.4575–8400ರಲ್ಲಿ ಬಡ್ತಿ ನೀಡಿರುತ್ತಾರೆ ನಂತರ ಶ್ರೀಯುತರಿಗೆ ಸರ್ಕಾರದ ಪತ್ರದ ಸಂಖ್ಯೆ:ನ.ಅ.ಇ.28 ಬೆಂ. ರೂ.ಪ್ರಾ 2008 ದಿನಾಂಕ:29–12–2008ರಂದು ನಗರ ಯೋಜನಾ ಪರಿವೀಕ್ಷಕರ ಹುದ್ದೆಗೆ ವೇತನ ಶ್ರೇಣಿ ರೂ.11400–21600ರಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 32ರಲ್ಲಿ ಬಡ್ತಿ ನೀಡಲಾಗಿದೆ. ತದನಂತರ ಸರ್ಕಾರದ ಪತ್ರ ಸಂಖ್ಯೆ:ನ.ಅ.ಇ.28 ಬೆಂ ರೂಪ್ರಾ 2009 ದಿನಾಂಕ:05–6–2009ರಲ್ಲಿ **"ನಗರ ಯೋಜನಕರ"** ಹುದ್ದೆಗೆ ವೇತನ ಶ್ರೇಣಿ ರೂ.11400–21600ರಲ್ಲಿ ಸ್ಥಾನಪನ್ನಾ ಮುಂಬಡ್ತಿ ನೀಡಲಾಗಿದೆ. ನಂತರ ಶ್ರೀಯುತರಿಗೆ ಸರ್ಕಾರದ ಪತ್ರ ಸಂಖ್ಯೆ:ನ.ಅ.ಇ52ಬೆಂರೂ.ಪ್ರಾ 2011 ದಿನಾಂಕ:02–6–2017ರಂದು **"ನಗರ ಯೋಜನಾ ಸಹಾಯಕ ನಿರ್ದೇಶಕರ"** ಹುದ್ದಗೆ ವೇತನ ಶ್ರೇಣಿ ರೂ.28100–50100ರಲ್ಲಿ ಸ್ಥಾನಪನ್ನಾ ಬಡ್ತಿ ನೀಡಿರುತ್ತಾರೆ. ಶ್ರೀಯುತರು ದಿನಾಂಕ:31–5–2018ರಂದು ಸೇವೆಯಿಂದ ವಯೋ ನಿವೃತ್ತಿ ಹೊಂದಿರುತ್ತಾರೆ.

ಶ್ರೀಯುತರಿಗೆ ದಿನಾಂಕ:02–06–2009ರಂದು **"ನಗರ ಯೋಜನಕರ"** ಹುದ್ದೆಗೆ ವೇತನ ಶ್ರೇಣಿ ರೂ.11400–21600ರಲ್ಲಿ ಸ್ಥಾನಪನ್ನ ಬಡ್ತಿ ನೀಡಿದಾಗ ಹಾಗೂ ದಿನಾಂಕ:07–06–2012ರಂದು ಸಹಾಯಕ ನಿರ್ದೇಶಕರ ಹುದ್ದೆಗೆ ವೇತನ ಶ್ರೇಣಿ ರೂ.28100–50100ರಲ್ಲಿ ಬಡ್ತಿ ನೀಡಿದಾಗ ಶ್ರೀಯುತರ ವೇತನವನ್ನು ಬಡ್ತಿ ಹುದ್ದೆಯ ವೇತನ ಶ್ರೇಣಿಯಲ್ಲಿ ಕನಿಷ್ಠ ಹಂತಕ್ಕೆ ಕೆ.ಸಿ.ಎಸ್.ಆರ್ ನಿಯಮ 42 ಬಿ(1)ರ ಅನ್ವಯ ನಿಗದಿಪಡಿಸಲಾಗಿದೆ. ಆದರೆ ನಂತರ ಶ್ರೀಯುತರಿಗೆ ಬಡ್ತಿ ಹುದ್ದೆಯ ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷದ ನಂತರ ಬಿಡುಗಡೆ ಮಾಡಬೇಕಾಗಿತ್ತು. ಆದರೆ ಹಿಂದಿನ ವಾರ್ಷಿಕ ಬಡ್ತಿ ದಿನಾಂಕದಿಂದಲೇ ವಾರ್ಷಿಕ ವೇತನ ಬಡ್ತಿಯನ್ನು ನೀಡಿ ವೇತನವನ್ನು ನಿಗದಿಪಡಿಸಲಾಗಿದೆ. ಆದರೆ ಈ ಪ್ರಕರಣದಲ್ಲಿ ಕೆ.ಸಿ.ಎಸ್.ಆರ್ ನಿಯಮ 42 ಬಿ(2) ಪ್ರಕಾರ ವೇತನವನ್ನು ಮರುನಿಗದಿಪಡಿಸಲು ಅವಕಾಶ ಇರುವುದಿಲ್ಲ ವಾರ್ಷಿಕ ವೇತನ ಬಡ್ತಿಯನ್ನು ಬಡ್ತಿ ನೀಡಿದ ದಿನಾಂಕದಿಂದ ಒಂದು ವರ್ಷದ ನಂತರ ವಾರ್ಷಿಕ ವೇತನ ಬಡ್ತಿ ನೀಡಬೇಕಾಗಿರುತ್ತದೆ. ಈ ಪ್ರಕರಣದಲ್ಲಿ ಶ್ರೀಯುತರ ವೇತನ ದಿನಾಂಕ:1–2–2009 ರಿಂದ ತಪ್ಪಾಗಿ ನಿಗದಿಯಾಗಿದ್ದು ನಿಯಮಾವಳಿಯ ರೀತ್ಯಾ ಶ್ರೀಯುತರ ವೇತನವನ್ನು ಪುನರ್ ನಿಗದಿಪಡಿಸಬೇಕಾಗಿರುತ್ತದೆ.
ಶ್ರೀಯುತರ ವೇತನವನ್ನು ನಿಯಮಾವಳಿಯ ರೀತ್ಯಾ ಕೆಳಕಂಡಂತೆ ನಿಗದಿಪಡಿಸಬೇಕಾಗಿರುತ್ತದೆ.

ನಿಯಮಾವಳಿಯ ಪ್ರಕಾರ ವೇತನ ನಿಗದಿಪಡಿಸಬೇಕಾಗಿರುವುದು			ಸೇವಾವಹಿಯ ಪ್ರಕಾರ ವೇತನ ನಿಗದಿ		
ದಿನಾಂಕ	**ವೇತನ**	**ವೇತನ ಶ್ರೇಣಿ**	**ದಿನಾಂಕ**	**ವೇತನ**	**ವೇತನ ಶ್ರೇಣಿ**
1–2–2009	10000	8825–16000	1–2–2009	10000	8825–16000
2–6–2009	11400	ನಗರ ಯೋಜನಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ವೇತನ ಶ್ರೇಣಿ ರೂ.11400–21600ರಲ್ಲಿ ವೇತನ ನಿಗದಿ	29–12–2009	11400	ನಗರ ಯೋಜನಕರ ಹುದ್ದೆಗೆ ನಿಯಮ 32ರ ಅನ್ವಯ ಬಡ್ತಿ ವೇತನ ಶ್ರೇಣಿ ರೂ.11400–21600ರಲ್ಲಿ ವೇತನ ನಿಗದಿ
1–6–2010	11700	ವಾರ್ಷಿಕ ವೇತನ ಬಡ್ತಿ	1–2–2010	11700	ವಾರ್ಷಿಕ ವೇತನ ಬಡ್ತಿ

1–6–2011	12000	ವಾರ್ಷಿಕ ವೇತನ ಬಡ್ತಿ	1–2–2011	12000	ವಾರ್ಷಿಕ ವೇತನ ಬಡ್ತಿ
1–4–2012	24000	ಪರಿಷ್ಕೃತ ವೇತನ ಶ್ರೇಣಿ ರೂ.22800–43200ರಲ್ಲಿ ವೇತನ ನಿಗದಿ	1–2–2012	12300	ವಾರ್ಷಿಕ ವೇತನ ಬಡ್ತಿ
			1–4–2012	24600	ಪರಿಷ್ಕೃತ ವೇತನ ಶ್ರೇಣಿ ರೂ.22800–43200ರಲ್ಲಿ ವೇತನ ನಿಗದಿ
2–6–2012	28100	ನಗರ ಯೋಜನಾ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ವೇತನ ಶ್ರೇಣಿ ರೂ.28100–50100ರಲ್ಲಿ ವೇತನ ನಿಗದಿ	2–6–2012	28100	ನಗರ ಯೋಜನಾ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ವೇತನ ಶ್ರೇಣಿ ರೂ.28100–50100ರಲ್ಲಿ ವೇತನ ನಿಗದಿ
1–6–2013	28800	ವಾರ್ಷಿಕ ವೇತನ ಬಡ್ತಿ	1–2–2013	28800	ವಾರ್ಷಿಕ ವೇತನ ಬಡ್ತಿ
1–6–2014	29600	ವಾರ್ಷಿಕ ವೇತನ ಬಡ್ತಿ	1–2–2014	29600	ವಾರ್ಷಿಕ ವೇತನ ಬಡ್ತಿ
1–6–2015	30400	ವಾರ್ಷಿಕ ವೇತನ ಬಡ್ತಿ	1–2–2015	30400	ವಾರ್ಷಿಕ ವೇತನ ಬಡ್ತಿ
1–6–2016	31200	ವಾರ್ಷಿಕ ವೇತನ ಬಡ್ತಿ	1–2–2016	31200	ವಾರ್ಷಿಕ ವೇತನ ಬಡ್ತಿ
1–6–2017	32000	ವಾರ್ಷಿಕ ವೇತನ ಬಡ್ತಿ	1–2–2017	32000	ವಾರ್ಷಿಕ ವೇತನ ಬಡ್ತಿ
1–7–2017	56800	ಪರಿಷ್ಕೃತ ವೇತನ ಶ್ರೇಣಿ ರೂ.52650–97100ರಲ್ಲಿ ವೇತನ ನಿಗದಿ ಆರ್ಥಿಕ ಸೌಲಭ್ಯ ದಿ:1–4–2018 ರಿಂದ	1–7–2017	56800	ಪರಿಷ್ಕೃತ ವೇತನ ಶ್ರೇಣಿ ರೂ.52650–97100ರಲ್ಲಿ ವೇತನ ನಿಗದಿ ಆರ್ಥಿಕ ಸೌಲಭ್ಯ ದಿ:1–4–2018 ರಿಂದ
			1–2–2018	58250	ವಾರ್ಷಿಕ ವೇತನ ಬಡ್ತಿ
31–5–2018	56800	ವಯೋ ನಿವೃತ್ತಿ	30–5–2018	58250	ವಯೋ ನಿವೃತ್ತಿ

ಶ್ರೀಯುತರಿಗೆ ದಿ:1–2–2010 ರಿಂದ 31–5–2012ರ ವರೆಗೆ ಹಾಗೂ 1–2–2013 ರಿಂದ 31–5–2018ರ ವರೆಗೆ ಪ್ರತಿ ವರ್ಷ 4 ತಿಂಗಳು ಮುಂಚಿತವಾಗಿ ವಾರ್ಷಿಕ ವೇತನ ಬಡ್ತಿ ಪಡೆದಿರುವ ಬಾಬ್ತು ಹೆಚ್ಚುವರಿ ವೇತನ ಮೊತ್ತ ರೂ.35386/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಬೇಕಾಗಿರುತ್ತದೆ.

ಶ್ರೀಯುತರ ವಯೋನಿವೃತ್ತ ಪಿಂಚಣಿ ಸೌಲಭ್ಯಗಳನ್ನು ನಿಯಮಾವಳಿಯ ರೀತ್ಯಾ ಕೆಳಕಂಡಂತೆ ನಿಗದಿಪಡಿಸಬೇಕಾಗಿರುತ್ತದೆ.

ಜನ್ಮ ದಿನಾಂಕ	22–05–1958
ವಯೋ ನಿವೃತ್ತಿ ದಿನಾಂಕ	31–05–2018
ಸೇವೆಗೆ ಸೇರಿದ ದಿನಾಂಕ	16–08–1991
ನಿವ್ವಳ ಅರ್ಹ ಸೇವೆ	15–09– 26

ಅರ್ಹ ಸೇವೆಯನ್ನು 54 ಅರ್ಧ ವರ್ಷಗಳಿಗೆ ಮಿತಿಗೊಳಿಸಿದೆ

ನಿಯಮಾವಳಿಯ ಪ್ರಕಾರ ಅಂತಿಮ ವೇತನ ರೂ.56800/–

ನಿಯಮಾವಳಿಯ ಪ್ರಕಾರ ವಯೋ ನಿವೃತ್ತ ಪಿಂಚಣಿ ಸೌಲಭ್ಯಗಳನ್ನು ಪ್ರಾಧೀಕರಿಸಿ ಪಾವತಿಸಬೇಕಾಗಿರುವುದು	**ಈಗಾಗಲೇ ವಯೋ ನಿವೃತ್ತ ಪಿಂಚಣಿ ಸೌಲಭ್ಯಗಳನ್ನು ಪ್ರಾಧೀಕರಿಸಿ ಪಾವತಿಸಿರುವುದು**	**ವ್ಯತ್ಯಾಸ**
1. ನಿವೃತ್ತಿ ವೇತನ:– 56800*54 ರೂ.23237 2*66	**1. ನಿವೃತ್ತಿ ವೇತನ:–** 58250*53 ರೂ.23388 2*66	151
2. ನಿವೃತ್ತ ಉಪದಾನ:– 56800*54 ರೂ.766800 4	**2. ನಿವೃತ್ತ ಉಪದಾನ:–** 58250*54 ರೂ.771813 4	5013

3. ಪರಿವರ್ತಿತ ಪಿಂಚಣಿ:– 7745*9.81*12 ರೂ.911741	**3. ಪರಿವರ್ತಿತ ಪಿಂಚಣಿ:–** 7796*9.81*12 ರೂ.917745	6004
4. ಕುಟುಂಬ ಪಿಂಚಣಿ:– 56800*30 ರೂ.17040 100	**4. ಕುಟುಂಬ ಪಿಂಚಣಿ:–** 23388*20 ರೂ.4678 100	ಕಡಿಮೆ ಪ್ರಾಧಿಕರಿಸಿರುತ್ತಾರೆ
5. ಗಳಿಕೆ ರಜೆ ನಗದೀಕರಣ:– 56800*297 ರೂ.562320 30	**5. ಗಳಿಕೆ ರಜೆ ನಗದೀಕರಣ:–** 58250*297 ರೂ.576675 30	14355
	ಒಟ್ಟು	**25346**

ಮೇಲ್ಕಂಡ ನಿವೃತ್ತ ನೌಕರರಿಗೆ ದಿನಾಂಕ:1–2–2010 ರಿಂದ 31–5–2018ರ ವರೆಗೆ ಹೆಚ್ಚಿಗೆ ಪಾವತಿಸಲಾದ ವೇತನ ಒಟ್ಟು ರೂ.35386/–ಗಳು ಹಾಗೂ ಹೆಚ್ಚಿಗೆ ಪಾವತಿಸಲಾದ ನಿವೃತ್ತ ಉಪದಾನ ರೂ.5013/–ಪರಿವರ್ತಿತ ಪಿಂಚಣಿ ರೂ.6004/– ಹಾಗೂ ನಿವೃತ್ತ ಪೂರ್ವ ಗಳಿಕೆ ರಜೆ ನಗಧಿಕರಣ ರೂ.14355 ಒಟ್ಟು ರೂ.60758/–ಗಳನ್ನು ಸಂಬಂಧಿಸಿದವರಿಂದ ವಸೂಲಿಸಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ತಗೆದುಕೊಳ್ಳುವುದು.

ಶ್ರೀಯುತರ ವೇತನವನ್ನು ದಿ:1–2–2009 ರಿಂದ ನಿವೃತ್ತಿಯ ದಿನಾಂಕದವರೆಗೆ ನಿಯಮಾವಳಿಯ ರೀತ್ಯಾ ಪುನರ್‌ನಿಗದಿಪಡಿಸಿ ಸಂಬಂಧಿಸಿದ ನೌಕರರ ಸೇವಾವಹಿಯಲ್ಲಿ ದಾಖಲಿಸಿ ದೃಢೀಕರಿಸಿ ನಂತರ ಶ್ರೀಯುತರ ವಯೋ ನಿವೃತ್ತಿ ಪಿಂಚಣಿ ಸೌಲಭ್ಯಗಳನ್ನು ನಿಯಮಾವಳಿಯ ರೀತ್ಯಾ ಪರಿಷ್ಕರಿಸಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸುವುದು.

30. ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿ ಪಾವತಿಯ ಬಿಲ್ಲಿನಲ್ಲಿ ಕಂಡುಬಂದಂತಹ ನ್ಯೂನತೆಗಳು:–

ಚಿತ್ರದುರ್ಗ ನಗರದ 35ನೇ ವಾರ್ಡ್‌ನಲ್ಲಿ ಜೆ.ಜೆ ಹಟ್ಟಿ ನೀರಿನ ಟ್ಯಾಂಕ್ ಪಕ್ಕದಲ್ಲಿ ಶಿಥಿಲಗೊಂಡಿರುವ ಅಂಗನವಾಡಿ ಕಟ್ಟಡ ತೆರವುಗೊಳಿಸಿ ಹೊಸದಾಗಿ ಅಂಗನವಾಡಿ ಕಟ್ಟಡ ನಿರ್ಮಿಸಲು ನಿರ್ಮಿತಿ ಕೇಂದ್ರ ಚಿತ್ರದುರ್ಗ ಇವರಿಗೆ ಕೆಳಕಂಡ ಚೆಕ್ಕುಗಳಲ್ಲಿ ಹಣ ಪಾವತಿಸಿರುತ್ತಾರೆ.

ಕ್ರ.ಸಂ	ಚೆಕ್ ನಂ	ದಿನಾಂಕ	ಪಾವತಿಯ ಮೊತ್ತ	ಲೆಕ್ಕ ಶೀರ್ಷಿಕೆ
1	621221	30–10–2017	500000	ಕೊಳಚೆ ಅಭಿವೃದ್ಧಿಕರ ಶೇಕಡ–30ರ ನಿಧಿ
2	00312	15–01–2018	300000	ಸಾಮಾನ್ಯ ನಿಧಿ
3	298829	23–3–2018	285000	ಸಾಮಾನ್ಯ ನಿಧಿ
		ಒಟ್ಟು	**1085000**	

ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.10.85ಲಕ್ಷ ಏಜೆನ್ಸಿ:ಮೆ॥ನಿರ್ಮಿತಿ ಕೇಂದ್ರ ಚಿತ್ರದುರ್ಗ

ಸದರಿ ಕಾಮಗಾರಿಯ ಕಡತ ಪರಿಶೀಲಿಸಿದಾಗ ಕೆಳಕಂಡ ನ್ಯೂನತೆಗಳು ಕಾಮಗಾರಿ ಬಿಲ್ಲಿನಲ್ಲಿ ಕಂಡುಬಂದಿರುತ್ತವೆ.

1. ಶಿಥಿಲಗೊಂಡ ಅಂಗನವಾಡಿ ಕಟ್ಟಡ ತೆರವುಗೊಳಿಸಿದಾಗ, ಹಳೆಯ ಬಾಗಿಲು, ಕಿಟಕಿ, ಹೆಂಚು ತೀರು ಹಳೇ ಕಬ್ಬಿಣ, ಸೈಜುಕಲ್ಲು ಚಪ್ಪಡಿ ಇತ್ಯಾದಿ ಐಟಂಗಳನ್ನು ಹರಾಜು ಮಾಡಲಾಗಿದೆಯೇ ಸದರಿ ಹರಾಜಿನಿಂದ ಬಂದ ಹಣ ಪ್ರಾಧಿಕಾರದ ನಿಧಿಗೆ ಜಮೆ ಮಾಡಿರುವ ವಿವರ ಒದಗಿಸುವುದು ಒಂದು ವೇಳೆ ನಿರ್ಮಿತಿ ಕೇಂದ್ರ, ಚಿತ್ರದುರ್ಗರವರು ಸದರಿ ಐಟಂಗಳನ್ನು ಹರಾಜು/ಮಾರಾಟ ಮಾಡಲಾಗಿದೆಯೇ ಸದರಿ ಹರಾಜು/ಮಾರಾಟದಿಂದ ಬಂದ ಹಣ ಪ್ರಾಧಿಕಾರದ ಯಾವ ನಿಧಿಗೆ ಜಮಾ ಮಾಡಲಾಗಿದೆ ವಿವರ ಒದಗಿಸುವುದು.

2. ಸದರಿ ಕಾಮಗಾರಿ ಬಿಲ್ಲಿನಲ್ಲಿ ವ್ಯಾಟ್, ರಾಜಧನ, ಕಾರ್ಮಿಕರ ಕಲ್ಯಾಣ ಸುಂಕ, ಗುತ್ತಿಗೆದಾರರ ಕ್ಷೇಮನಿಧಿ ಕಟಾಯಿಸಿ ಸರ್ಕಾರಕ್ಕೆ ಜಮಾಮಾಡಿರುವ ವಿವರ ಒದಗಿಸುವುದು.
3. ಸದರಿ ಕಾಮಗಾರಿಯ ಬಿಲ್ಲುಗಳ ಜೆರಾಕ್ಸ್ ಪ್ರತಿ, ಅಳತೆ ಪುಸ್ತಕದ ನಕಲನ್ನು ನಿರ್ಮಿತಿ ಕೇಂದ್ರದಿಂದ ಪಡೆದು ಪರಿಶೀಲನೆಗೆ ಸಲ್ಲಿಸುವುದು. ಹಣ ಬಳಕೆ ಪ್ರಮಾಣ ಪತ್ರ ನಿರ್ಮಿತಿ ಕೇಂದ್ರದಿಂದ ಪಡೆದು ಸಲ್ಲಿಸುವುದು.
4. ಮೆ॥ ವಿನ್ಯಾಸ್ ಅಸೋಸಿಯೇಟ್ಸ್ ರವರು 3ನೇ ವ್ಯಾಕ್ತಿ ತಪಾಸಣಾ ವರದಿಯಲ್ಲಿ ಐಟಂ ನಂ:8,10,14,15,16,18,21,22,23,33 ರಿಂದ 37ರ ವರೆಗಿನ ಸಿಮೆಂಟ್ ಹಾಗೂ ಆರ್.ಸಿ.ಸಿ ಕಾಮಗಾರಿಯ ಐಟಂಗಳಿಗೆ ತಪಾಸಣಾ ವರದಿ ಇರುವುದಿಲ್ಲ. ಸದರಿ ಐಟಂಗಳಿಗೆ ತಪಾಸಣಾ ವರದಿ ಹಾಜರುಪಡಿಸಿಲ್ಲ.

ಮೇಲ್ಕಂಡ ನ್ಯೂನತೆಗಳಿಗೆ ಪ್ರಾಧೀಕಾರವು ಸಕಾರಣದೊಂದಿಗೆ ಸೂಕ್ತ ವಿವರಣೆ ನೀಡುವುದು.

31. ಪ್ರಿಕ್ಯಾಸ್ಟ್ ಬೆಂಚುಗಳನ್ನು ಸರಬರಾಜು ಮಾಡಿ ನಗರದ ವಿವಿಧ ಪಾರ್ಕಗಳಲ್ಲಿ ಅಳವಡಿಸಿರುವ ಕಾಮಗಾರಿ ಪಾವತಿಯ ಬಿಲ್ಲುಗಳಲ್ಲಿ ಕಂಡುಬಂದ ನ್ಯೂನತೆಗಳು:–

2017–18ನೇ ಸಾಲಿನಲ್ಲಿ ಪ್ರಾಧಿಕಾರವು ಪ್ರಿಕ್ಯಾಸ್ಟ್ ಬೆಂಚುಗಳನ್ನು ಸರಬರಾಜು ಮಾಡಿ ನಗರದ ವಿವಿಧ ಪಾರ್ಕ್‌ಗಳಲ್ಲಿ ಅಳವಡಿಸಲು ಪ್ರಾಧಿಕಾರದ ನಿಧಿಯಿಂದ ರೂ.10ಲಕ್ಷ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿಕೊಂಡಿರುತ್ತಾರೆ. ಸದರಿ ಕಾಮಗಾರಿಯನ್ನು ತಲಾ ರೂ.5 ಲಕ್ಷಗಳಂತೆ ಅಂದಾಜುಪಟ್ಟಿ ತಯಾರಿಸಿರುತ್ತಾರೆ. ಸದರಿ ಕಾಮಗಾರಿಯನ್ನು ಶ್ರೀ. ಟಿ. ದೇವರಾಜು ರವರು ತಲಾ ರೂ.499980/– ಗಳಂತೆ ದರ ನಮೂದಿಸಿದ್ದು ಸದರಿ ಕಾಮಗಾರಿಯನ್ನು ಶ್ರೀಯುತರು ಮಾಡಿರುತ್ತಾರೆ. ಸದರಿ ಕಾಮಗಾರಿ ಬಿಲ್ಲನ್ನು ಪರಿಶೀಲಿಸಿದಾಗ ಕೆಳಕಂಡ ನ್ಯೂನತೆಗಳು ಕಂಡು ಬಂದಿರುತ್ತವೆ.

1. ಸದರಿ ಕಾಮಗಾರಿಯನ್ನು ರೂ.10 ಲಕ್ಷಗಳಿಗೆ ಒಂದೇ ಅಂದಾಜು ಪಟ್ಟಿ ತಯಾರಿಸಿ "ಇ" ಪ್ರಕ್ಯೂರ್‌ಮೆಂಟ್ ಟೆಂಡರ್ ಕರೆಯುವುದರ ಬದಲಾಗಿ ಸದರಿ ಕಾಮಗಾರಿಯನ್ನು ಎರಡು ಭಾಗಗಳಾಗಿ ತಲಾ ರೂ.5ಲಕ್ಷದಂತೆ ವಿಭಜಿಸಿ ಪ್ರತ್ಯೇಕ ಅಂದಾಜು ಪಟ್ಟಿ ತಯಾರಿಸಿ ಮ್ಯಾನುಯಲ್ ಟೆಂಡರ್ ಕರೆಯಲಾಗಿದೆ. 'ಇ' ಪ್ರಕ್ಯೂರ್‌ಮೆಂಟರ್ ಟೆಂಡರ್ ಕರೆದಿದ್ದರೆ ಅನೇಕ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಿ ಸ್ಪರ್ಧಾತ್ಮಕ ದರ ನಮೂದಿಸುತ್ತಿದ್ದರು ಇದರಿಂದ ಪ್ರಾಧಿಕಾರಕ್ಕೆ ಹಣ ಉಳಿತಾಯವಾಗುವ ಸಂಬವ ಹೆಚ್ಚಿಗೆ ಇರುತ್ತಿತ್ತು. 'ಇ' ಪ್ರಕ್ಯೂರ್‌ಮೆಂಟ್ ಟೆಂಡರ್ ಕರೆಯದೇ ಇರುವುದಕ್ಕೆ ವಿವರಣೆ ನೀಡುವುದು.
2. ಅಂದಾಜು ಪಟ್ಟಿಯನ್ನು ಪರಿಶೀಲಿಸಲಾಗಿ ಅಂದಾಜು ಪಟ್ಟಿಯನ್ನು ಸವಿವರವಾಗಿ ತಯಾರಿಸಿರುವುದಿಲ್ಲ ಕೆ.ಪಿ.ಡಬ್ಯೂ.ಡಿ ಕೋಡ್ ಪ್ಯಾರ 115ರ ಅನ್ವಯ ಪೂರ್ವ ಬಾವಿ ಸ್ಥಳ ಪರಿಶೀಲನೆಯನ್ನು ಆಧರಿಸಿ ವಾಸ್ತವಿಕವಾಗುವಂತೆ ಅಂದಾಜು ಪಟ್ಟಿ ತಯಾರಿಸಬೇಕು ಆದರೆ ಈ ಕಾಮಗಾರಿ ಅಂದಾಜು ಪಟ್ಟಿ ಯಲ್ಲಿ ಯಾವ ಯಾವ ಪಾರ್ಕ್‌ಗಳಲ್ಲಿ ಎಷ್ಟು ಸಂಖ್ಯೆಯ ಬೆಂಚುಗಳನ್ನು ಅಳವಡಿಸಬೇಕಾಗಿರುತ್ತದೆ. ಎಂಬುದನ್ನು ನಮೂದಿಸಿಲ್ಲ
3. ಅಂದಾಜು ಪಟ್ಟಿಯನ್ನು ನಿರ್ಮಿಸಿ ಕೇಂದ್ರದ ಡಾಟಾರೇಟ್ ಮೇಲೆ ತಯಾರಿಸಲಾಗಿದೆ ಎಂದು ನಮೂದಿಸಿದ್ದರೂ ಸದರಿ ಡಾಟಾರೇಟ್‌ನ ಪ್ರತಿ ಕಡತದಲ್ಲಿ ಇರುವುದಿಲ್ಲ
4. ಅಳತೆ ಪುಸ್ತಕದ ಸಂಖ್ಯೆ:01/2012–13ರ ಪುಟ ಸಂಖ್ಯೆ 27ರಲ್ಲಿ ಹಾಗೂ 01/2010–11ರ ಪುಟ ಸಂಖ್ಯೆ 54ರಲ್ಲಿ ಸದರಿ ಕಾಮಗಾರಿಗಳ ಅಳತೆ ದಾಖಲಿಸಿದ್ದು ಸದರಿ ಅಳತೆ ಪುಸ್ತಕದಲ್ಲಿ ನಗರದ ಯಾವ ಯಾವ ಪಾರ್ಕ್‌ಗಳಲ್ಲಿ ಎಷ್ಟು ಸಂಖ್ಯೆಯ ಬೆಂಚುಗಳನ್ನು ಅಳವಡಿಸಲಾಗಿದೆ ಎಂಬುದರ ವಿವರ ಅಳತೆ ಪುಸ್ತಕದಲ್ಲಿ ಇಲ್ಲ ಅಭಿಯಂತರರು ಸ್ಥಳದಲ್ಲಿ ತನಿಖೆ ಮಾಡದೇ ಅಳತೆಗಳನ್ನು ಅಂದಾಜು ಪಟ್ಟಿಯಲ್ಲಿರುವಂತೆ ಕಛೇರಿಯಲ್ಲಿಯೇ ಕುಳಿತು ಅಳತೆ ದಾಖಲಿಸಿರುವುದು ಕಂಡುಬಂದಿರುತ್ತದೆ.
5. ಅಳತೆ ಪುಸ್ತಕ ಹಾಗೂ ಕಾಮಗಾರಿ ಬಿಲ್ಲನ್ನು ಪರಿಶೀಲಿಸಿದಾಗ ಅಳತೆ ದಾಖಲಿಸಿದ ಅಭಿಯಂತರರೇ ಚೆಕ್‌ಮೆಜರ್‌ಮೆಂಟ್ ಮಾಡಿರುತ್ತಾರೆ ಕೆ.ಪಿ.ಡಬ್ಲ್ಯೂ.ಡಿ ಕೋಡ್ ಪ್ಯಾರ 210ರ

ಅನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾಡಬೇಕಾಗಿರುತ್ತದೆ. ಪ್ರಾಧಿಕಾರದಲ್ಲಿ ಎ.ಇ.ಇ ಹುದ್ದೆ ಖಾಲಿ ಇದ್ದಲ್ಲಿ ನಗರಸಭೆಯ ಎ.ಇ.ಇ ರವರಿಂದ ಚೆಕ್ ಮೆಜರ್‌ಮೆಂಟ್ ಮಾಡಿಸಬಹುದಾಗಿತ್ತು ಬಿಲ್ಲಿನಲ್ಲಿ ಹಾಗೂ ಅಳತೆ ಪುಸ್ತಕದಲ್ಲಿ ಅಭಿಯಂತರರು ಅಳತೆ ದಾಖಲಿಸಿದ ದಿನಾಂಕ ನಮೂದಿಸಿಲ್ಲ.

6. ಗುತ್ತಿಗೆ ಕರಾರಿನಲ್ಲಿ ಖಾಲಿ ಇರುವ ಖಾಲಂಗಳ ಭರ್ತಿ ಮಾಡಿಲ್ಲ ಹಾಗೂ ಕರಾರಿನ ಪ್ರತಿಯೊಂದು ಪುಟಕ್ಕೂ ಪ್ರಾಧಿಕಾರದ ಆಯುಕ್ತರ ಸೀಲು ಸಹಿ ಇಲ್ಲ.
7. ಕಾಮಗಾರಿ ಕಾರ್ಯದೇಶದಲ್ಲಿ ಗುತ್ತಿಗೆದಾರನು ಕಾಮಗಾರಿ ಮುಗಿಸಬೇಕಾದ ದಿನಾಂಕ ನಮೂದಿಸಿಲ್ಲ.
8. ಕಾಮಗಾರಿ ಮುಕ್ತಾಯದ ಪ್ರಮಾಣ ಪತ್ರ ಲಗತ್ತಿಸಿಲ್ಲ.
9. ಕಾಮಗಾರಿ ಕಡತಗಳಲ್ಲಿ ಲಗತ್ತಿಸಿರುವ ಕಾಮಗಾರಿಯ ವಿವಿಧ ಹಂತದ ಫೋಟೋಗಳನ್ನು ಪರಿಶೀಲಿಸಿದಾಗ ಎರಡು ಕಾಮಗಾರಿ ಕಡತಗಳಲ್ಲಿ ತಲಾ 15 ಸಂಖ್ಯೆಯ ಬೆಂಚುಗಳನ್ನು ಅಳವಡಿಸಿರುವುದು ಕಂಡುಬಂದಿರುತ್ತದೆ ಉಳಿಕೆ ಬೆಂಚುಗಳನ್ನು ಅಳವಡಿಸಿರುವ ಫೋಟೋಗಳು ಕಡತದಲ್ಲಿ ಕಂಡುಬರುತ್ತಿಲ್ಲ.

ಮೇಲ್ಕಂಡ ನ್ಯೂನತೆಗಳಿಗೆ ಸೂಕ್ತ ಸಕಾರಣಯುಕ್ತ ವಿವರಣೆ ನೀಡುವವರೆಗೆ ಸದರಿ ಕಾಮಗಾರಿಗಳಿಗೆ ಕೆಳಕಂಡ ಚೆಕ್ಕುಗಳಲ್ಲಿ ಗುತ್ತಿಗೆದಾರರ ಶ್ರೀ. ಟಿ. ದೇವರಾಜು ಇವರಿಗೆ ಪಾವತಿಸಿರುವ ಒಟ್ಟು ಬಿಲ್ಲಿನ ಮೊತ್ತ ರೂ.999960/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಕ್ರ.ಸಂ	ಚೆಕ್‌ನಂ	ದಿನಾಂಕ	ಪಾವತಿಯ ಮೊತ್ತ
1	298858	31–3–2018	499980
2	298859	31–3–2018	499980

32. ಕೆಂಚನಕಟ್ಟೆ ಹಂತ–1ರ ಭೀಮಸಂದ್ರ ರಸ್ತೆಯಲ್ಲಿ ಬೋರ್‌ವೆಲ್ ಕೊರೆದು ಪಂಪು ಮೋಟಾರ್ ಅಳವಡಿಸಿದ ಕಾಮಗಾರಿ ಪಾವತಿಯ ಬಿಲ್ಲುಗಳಲ್ಲಿ ಕಂಡುಬಂದ ನ್ಯೂನತೆಗಳು:–

ಮೇಲ್ಕಂಡ ಕಾಮಗಾರಿಯ ಬಿಲ್ಲುನ್ನು ಚೆಕ್ ನಂ:298836 ದಿನಾಂಕ:31–3–2018 ರಂದು ರೂ.489500/–ಗಳನ್ನು ಗುತ್ತಿಗೆದಾರ ಶ್ರೀ. ಬಿ. ಮಂಜುನಾಥ, ರವರಿಗೆ ಪಾವತಿಸಲಾಗಿದ್ದು ಸದರಿ ಪಾವತಿಗೆ ಸಂಬಂಧಿಸಿದ ಕಾಮಗಾರಿ ಕಡತ ಹಾಗೂ ಬಿಲ್ಲನ್ನು ಪರಿಶೀಲಿಸಲಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. ಬೋರ್‌ವೆಲ್ ಕೊರೆದ ದಿನಾಂಕ ನಮೂದಿಸಿರುವುದಿಲ್ಲ ಬೋರ್ ಕೊರೆದ ದಿನವೇ ಕೇಸಿಂಗ್ ಪೈಪು ಅಳವಡಿಕೆಯ ವಿವರ ಹಾಗೂ ಬೋರ್‌ವೆಲ್ ಅಂತಿಮ ಹಂತ ಕೊರೆದ ನಂತರ ಬೋರ್‌ವೆಲ್ ಕೊರೆಯುವ ರಾಡುಗಳನ್ನು ಎತ್ತುವ ಸಮಯದಲ್ಲೇ ಎಣಿಕೆ ಮಾಡಿ ಕೊಳವೆ ಬಾವಿ ಕೊರೆದ ಅಳತೆ ದಾಖಲಿಸಬೇಕಾಗಿರುತ್ತದೆ. ಇದರಿಂದಾಗಿ ಕೊಳವೆ ಬಾವಿ ಕೊರೆದ ನಿಖರ ಅಳತೆ ಸಿಗುತ್ತದೆ. ಅಭಿಯಂತರರು ಅಳತೆ ಪುಸ್ತಕದಲ್ಲಿ ಕೊಳವೆ ಬಾವಿ ಕೊರೆದ ದಿನಾಂಕ ನಮೂದಿಸಿಲ್ಲ
2. ಅಳತೆ ಪುಸ್ತಕದ ಸಂಖ್ಯೆ:01/2012–13 ಪುಟ ಸಂಖ್ಯೆ:15–26ರಲ್ಲಿ ದಾಖಲಿಸಿರುವ ಅಳತೆಯು ಅಂದಾಜು ಪಟ್ಟಿಯಲ್ಲಿ ಇರುವಂತೆ ಯಥಾವಥಾಗಿ ಅಳತೆ ಪುಸ್ತಕದಲ್ಲಿ ದಾಖಲಿಸಿದೆ ಬೋರ್‌ವೆಲ್ ಕೊರೆದು ಪಂಪು ಮೋಟಾರ್ ಅಳವಡಿಸಿ ಪೈಪ್‌ಲೈನ್ ಅಳವಡಿಕೆಯ ಅಳತೆಯು ಅಂದಾಜು ಪಟ್ಟಿಯಲ್ಲಿರುವಂತೆ ನಿಖರವಾಗಿರುವುದಿಲ್ಲ. ಕಾಮಗಾರಿ ಮಾಡುವಾಗ ಅಳತೆ ಕೆಲವೊಂದು ಐಟಂಗಳ ಅಳತೆ ಹೆಚ್ಚು ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಅಭಿಯಂತರರು ಕಾಮಗಾರಿಯ ಅಳತೆಯನ್ನು ಸ್ಥಾನಿಕವಾಗಿ ಅಳತೆ ಪರಿಶೀಲಿಸದೇ ಕಛೇರಿಯಲ್ಲೇ ಕುಳಿತು ಅಳತೆ ಪುಸ್ತಕ ದಾಖಲಿಸಿರುವುದು ಮೇಲು ನೋಟಕ್ಕೆ ಕಂಡು ಬಂದಿರುತ್ತದೆ.
3. ಬೋರ್‌ವೆಲ್‌ಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ ಬಗ್ಗೆ ಬೆಸ್ಕಾಂ ಕಛೇರಿಯಿಂದ ಸರ್ವೀಸ್ ಸರ್ಟಿಫಿಕೇಟ್ ಪಡೆದಿಲ್ಲ ಹಾಗೂ ಬೆಸ್ಕಾಂಗೆ ಡೆಪಾಸಿಟ್ ಪಾವತಿಸಿದ ರಶೀದಿ ಕಡತದಲ್ಲಿ ಲಗತ್ತಿಸಿಲ್ಲ.

4. ಬೋರ್‌ವೆಲ್ ಕೊರೆಯುವ ಹಾಗೂ ಪೈಪ್‌ಲೈನ್ ಅಳವಡಿಕೆಯ ವಿವಿಧ ಹಂತದ ಫೋಟೋಗಳು ಕಡತದಲ್ಲಿ ಲಗತ್ತಿಸಿಲ್ಲ.
5. ಮೂರನೇ ವ್ಯಕ್ತಿ ತಪಾಸಣಾ ವರದಿಯಲ್ಲಿ ಬೋರ್‌ವೆಲ್ ಕೊರೆದ ಆಳ ಹಾಗೂ ಕೇಸಿಂಗ್ ಪೈಪು ಅಳವಡಿಕೆಯ ವಿವರ ಹಾಗೂ ಪೈಪು ಲೈನು ಹಾಕಿದ ಬಗ್ಗೆ ಪರಿವೀಕ್ಷಣಾ ವರದಿಯಲ್ಲಿ ತಿಳಿಸಿಲ್ಲ.
6. ಅಳತೆ ಪುಸ್ತಕದಲ್ಲಿ ಅಭಿಯಂತರರು ಅಳತೆ ದಾಖಲಿಸಿದ್ದು ಬಿಲ್ಲಿನಲ್ಲಿ ಹಾಗೂ ಅಳತೆ ಪುಸ್ತಕದಲ್ಲಿ ಅಳತೆ ದಾಖಲೆ ಮಾಡಿದ ದಿನಾಂಕ ನಮೂದಿಸಿಲ್ಲ ಅಳತೆ ದಾಖಲಿಸಿದ ಅಭಿಯಂತರರೇ ಚೆಕ್‌ಮೆಜರ್‌ಮೆಂಟ್ ಹಾಕಿರುತ್ತಾರೆ. ಕೆ.ಪಿ.ಡಬ್ಲ್ಯೂ.ಡಿ ಕೋಡ್ ಪ್ಯಾರ 210ರ ಅನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಶೇಕಡ 100ರಷ್ಟು ಅಳತೆಗಳನ್ನು ಪುನರ್ ಪರಿಶೀಲಿಸಬೇಕು ಹಾಗೂ ನಿಖರವಾಗಿ ''Checked the measurements and found correct'' ಎಂದು ಬರೆದು ಸಹಿ ಹಾಕಬೇಕಾಗಿರುತ್ತದೆ. ಪ್ರಾಧಿಕಾರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಇಲ್ಲದೇ ಇದ್ದರೆ ನಗರಸಭೆಯ ಎ.ಇ.ಇ ರವರಿಂದ ಚೆಕ್‌ಮೆಜರ್‌ಮೆಂಟ್ ಹಾಕಿಸಬೇಕಾಗಿತ್ತು. ಎರಡು ಕೆಲಸಗಳನ್ನು ಒಬ್ಬರೆ ಅಭಿಯಂತರರು ಮಾಡಿರುವುದಕ್ಕೆ ವಿವರಣೆ ನೀಡುವುದು.
7. ಗುತ್ತಿಗೆ ಕರಾರಿನಲ್ಲಿ ಖಾಲಿ ಇರುವ ಖಾಲಂಗಳನ್ನು ಭರ್ತಿ ಮಾಡಿಲ್ಲ ಹಾಗೂ ಕರಾರಿನ ಪ್ರತಿಯೊಂದು ಪುಟಕ್ಕೂ ಆಯುಕ್ತರ ಸೀಲು ಸಹಿ ಇಲ್ಲ
8. ಕಾಮಗಾರಿ ಆದೇಶದಲ್ಲಿ (work order)ಕಾಮಗಾರಿ ಮುಕ್ತಾಯಗೊಳಿಸಬೇಕಾದ ದಿನಾಂಕ ನಮೂದಿಸಿಲ್ಲ ಗುತ್ತಿಗೆದಾರನಿಗೆ ಕಾಮಗಾರಿ ಪ್ರಾರಂಭಿಸಲು ಸೈಟು ವಹಿಸಿಕೊಟ್ಟಿರುವುದಕ್ಕೆ ಅಭಿಯಂತರರ ವರದಿ ಇಲ್ಲ ಹಾಗೂ ಕಾಮಗಾರಿ ಪೂರ್ಣಗೊಂಡ ಪ್ರಮಾಣ ಪತ್ರ ಲಗತ್ತಿಸಿಲ್ಲ.

ಮೇಲ್ಕಂಡ ನ್ಯೂನತೆಗಳಿಗೆ ಸೂಕ್ತ ವಿವರಣೆ ನೀಡುವವರೆಗೆ ಸದರಿ ಕಾಮಗಾರಿಗೆ ಪಾವತಿಸಿರುವ ಒಟ್ಟು ರೂ.5,00,000/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

34. ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸದಿರುವುದು:–

ಪ್ರಾಧಿಕಾರವು ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸಿರುವುದಿಲ್ಲ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987ರ ಸೆಕ್ಷನ್ 48(1)ರ ಅನ್ವಯ ಜಮಾ ಹಾಗೂ ಖರ್ಚಿನ ತಃಖ್ತೆ ಆದಾಯ ಮತ್ತು ವೆಚ್ಚದ ತಃಖ್ತೆ ಹಾಗೂ ಬ್ಯಾಲೆನ್ಸ್‌ಶೀಟ್‌ನ್ನು ತಯಾರಿಸಿರುವುದಿಲ್ಲ ಪ್ರಾಧಿಕಾರವು 2017–18ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ತಯಾರಿಸಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿ ಪ್ರಾಧಿಕಾರದ ಸಭೆಯ ಅನುಮೋದನೆ ಪಡೆದು ಅನುಮೋದಿತ ವಾರ್ಷಿಕ ಲೆಕ್ಕಗಳನ್ನು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಕ್ಕೆ ಕಳುಹಿಸಲು ತಿಳಿಸಿದೆ.

35. ಸಿಬ್ಬಂದಿ ಕೊರತೆಯ ಬಗ್ಗೆ:–

ಸರ್ಕಾರದ ಅಧಿಸೂಚನೆ ಸಂಖ್ಯೆ:ಯು.ಡಿ.23 Aprase 2001 ದಿ:4–10–2004ರ ಅನ್ವಯ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ(ವೃಂದ ಮತ್ತು ನೇಮಕಾತಿ) ರೆಗ್ಯೂಲೇಶನ್ 2004ರ ನಿಯಮ 6 ಅನ್ವಯ ಈ ಪ್ರಾಧಿಕಾರಕ್ಕೆ ಮಂಜೂರಾಗಿರುವ ಹುದ್ದೆಗಳ ವಿವರ ಕೆಳಕಂಡಂತೆ ಇರುತ್ತದೆ. ಸದರಿ ಮಂಜೂರಾದ ಹುದ್ದೆಗಳಿಗೆ ಎದುರಾಗಿ ಹಾಗೂ 2017–18ನೇ ಸಾಲಿಗೆ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಕೆಳಕಂಡಂತೆ ಇರುತ್ತವೆ.

ಕ್ರ.ಸಂ	ಹುದ್ದೆಯ ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಆಯುಕ್ತರು	01	01	–
2	ಸಹಾಯಕ ನಿರ್ದೇಶಕರು ನಗರ ಯೋಜನೆ	01	01	–
3	ಸಹಾಯಕ ಕಾರ್ಯ ಪಾಲಕ	01	01	–

	ಅಭಿಯಂತರರು			
4	ಸಹಾಯಕ ಇಂಜಿನಿಯರ್	01	–	01
5	ಕಿರಿಯ ನಗರ ಯೋಜಕ	01	–	01
6	ನಗರ ಯೋಜನಾ ಪರಿವೀಕ್ಷಕರು	01	–	01
7	ಕಛೇರಿ ಅಧೀಕ್ಷಕರು	01	–	01
8	ಸ್ಟೆನೋಗ್ರಾಫರ್	01	–	01
9	ಪ್ರಥಮ ದರ್ಜೆ ಸಹಾಯಕರು	01	01	–
10	ದ್ವಿತೀಯ ದರ್ಜೆ ಸಹಾಯ	01	01	–
11	ಟ್ರೇಸರ್	01	–	01
12	ಕ್ಲರ್ಕ್ ಕಂ ಬೆರಳಚ್ಚುಗಾರ	01	–	01
13	ಬ್ಲೂ ಪ್ರಿಂಟರ್	01	01	–
14	ವಾಹನ ಚಾಲಕರು	02	02	–
15	ಗ್ರೂಪ್ 'ಡಿ'	01	–	01
	ಒಟ್ಟು	**16**	**08**	**08**

ಪ್ರಾಧಿಕಾರಕ್ಕೆ ಮಂಜೂರಾದ 16 ಹುದ್ದೆಗಳಲ್ಲಿ ಗ್ರೂಪ್ "ಸಿ" ಹಾಗೂ "ಡಿ" ದರ್ಜೆಯ 08 ಹುದ್ದೆಗಳು ಖಾಲಿ ಉಳಿದಿರುತ್ತವೆ. ಗ್ರೂಪ್ 'ಸಿ' ಹಾಗೂ 'ಡಿ' ದರ್ಜೆಯ ಹುದ್ದೆಗಳು ಬಹುಕಾಲದಿಂದ ಖಾಲಿ ಉಳಿದಿದ್ದು ಪ್ರಾಧಿಕಾರದ ಸಾರ್ವಜನಿಕ ಸೇವೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಪ್ರಾಧಿಕಾರವು ಸಾರ್ವಜನಿಕ ಸೇವೆಯ ಉದ್ದೇಶ ಹೊಂದಿವುದರಿಂದ ಕಛೇರಿಯ ದಿನನಿತ್ಯದ ಆಡಳಿತ ಹಾಗೂ ಸೇವೆ ಒದಗಿಸಲು ಪ್ರಾಧಿಕಾರಕ್ಕೆ ಕಷ್ಟವಾಗುತ್ತಿದೆ. ಹಾಗೂ ಸಿಬ್ಬಂದಿಯ ಕೊರತೆಯಿಂದಾಗಿ ಹಾಲಿ ಇರುವ ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚಾಗಿ ಮನೋ ಸ್ಥರ್ಯ ಕುಗ್ಗತ್ತದೆ ಈ ಹಿನ್ನಲೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ನೇಮಕಾತಿ ಪ್ರಾಧಿಕಾರಕ್ಕೆ ವರದಿ ಸಲ್ಲಿಸಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮವಹಿಸಬಹುದಾಗಿದೆ.

36. ಅಭಿವೃದ್ಧಿ ಶುಲ್ಕವನ್ನು ಕಡಿಮೆ ವಸೂಲಿ ಮಾಡುತ್ತಿರುವ ಕುರಿತು:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 37 "ಎ" ರ ಅನ್ವಯ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರವು ಖಾಸಗಿ ಬಡಾವಣೆಗಳ ವಸತಿ ವಿನ್ಯಾಸವನ್ನು ಅನುಮೋದಿಸಿರುವ ಪ್ರಕರಣಗಳಲ್ಲಿ ಅಭಿವೃದ್ಧಿ ಶುಲ್ಕವನ್ನು ಕೆಳಕಂಡಂತೆ ವಸೂಲಿ ಮಾಡಲಾಗಿದೆ.

ಕ್ರ.ಸಂ	**ಉದ್ದೇಶ**	**ಅಭಿವೃದ್ಧಿ ಶುಲ್ಕ ಪ್ರತಿ ಚ. ಮೀಟರಿಗೆ**
1	ವಸತಿ	4
2	ಕೈಗಾರಿಕೆ	8
3	ವಾಣಿಜ್ಯ	12

ಮೇಲ್ಕಂಡ ಶುಲ್ಕಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 18ರ ಪ್ರಕಾರ ಖಾಸಗಿ ಬಡಾವಣೆಗಳಲ್ಲಿ ಅಭಿವೃದ್ಧಿ ಶುಲ್ಕವನ್ನು ಸೆಕ್ಷನ್ 14ಎ, 14ಬಿ, 15 ಹಾಗೂ 17ರಂತೆ ಖಾಸಗಿ ಬಡಾವಣೆಯಲ್ಲಿ ಅಭಿವೃದ್ಧಿ ಪಡಿಸಲಾದ ನಿವೇಶನಗಳ ಲಾಭಾಂಶದ ಮೂರನೇ ಒಂದು ಭಾಗ ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡಲು ಕಾಯಿದೆಯಲ್ಲಿ ಅವಕಾಶ ಇರುತ್ತದೆ.

2017–18ನೇ ಸಾಲಿನಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವು ವಸತಿ ವಿನ್ಯಾಸ ಅನುಮೋದಿಸಿರುವ ಖಾಸಗಿ ಬಡಾವಣೆಗಳ ಮಾಲೀಕರಿಂದ ಅಭಿವೃದ್ಧಿ ಶುಲ್ಕವನ್ನು ಖಾಸಗಿ ಬಡಾವಣೆಯಲ್ಲಿ ಅಭಿವೃದ್ಧಿ ಪಡಿಸಲಾದ ನಿವೇಶನಗಳ ಲಾಭಾಂಶದ ಮೂರನೇ ಒಂಧು ಭಾಗ ವಸೂಲಿ ಮಾಡಿರುವುದಿಲ್ಲ ಸದರಿ

ಸಾಲಿನಲ್ಲಿ ವಸತಿ ವಿನ್ಯಾಸ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ಖಾಸಗಿ ಬಡಾವಣೆಗಳ ಮಾಲೀಕರಿಂದ ಅಭಿವೃದ್ಧಿ ಶುಲ್ಕ ವಸೂಲಿಸಿರುವ ವಿವರವನ್ನು ಅನುಬಂಧ–6ರಲ್ಲಿ ವರದಿಗೆ ಲಗತ್ತಿಸಿದೆ ಸಂಬಂಧಿಸಿದ ಖಾಸಗಿ ಬಡಾವಣೆಗಳ ಮಾಲೀಕರಿಂದ ಕಡಿಮೆ ಪಾವತಿಸಿರುವ ಅಭಿವೃದ್ಧಿ ಶುಲ್ಕ ರೂ.366706002/–ಗಳನ್ನು ವಸೂಲಿಸದಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಸರ್ಕಾರದ ಹಂತದಲ್ಲಿ ವ್ಯವಹರಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 18ರ ಅನ್ವಯ ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸಿ ಪ್ರಾಧಿಕಾರದ ಆದಾಯವನ್ನು ಹೆಚ್ಚಿಸಿಕೊಳ್ಳಲು ಕ್ರಮ ವಹಿಸಬಹುದಾಗಿದೆ. ಈ ಬಗ್ಗೆ ಕ್ರಮ ಕೈಗೊಂಡು ಲೆಕ್ಕ ತನಿಖೆಗೆ ವರದಿ ಮಾಡುವವರೆಗೆ ಕಡಿಮೆ ವಸೂಲಿಸಿರುವ ಮೊಬಲಗು ರೂ.366706002/–ಗಳನ್ನು ಆಕ್ಷೇಪಿಸಿದೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯಿದೆಯಂತೆ ಖಾಸಗಿ ಬಡಾವಣೆಗಳ ವಸತಿ ವಿನ್ಯಾಸ ಅನುಮೋದಿಸುವ ಸಮಯದಲ್ಲಿ ಅಭಿವೃದ್ಧಿ ಶುಲ್ಕವನ್ನು ಸೆಕ್ಷನ್ 14ಎ 14ಬಿ 15 ಹಾಗೂ 18ರಂತೆ ವಸೂಲಾತಿ ಮಾಡಿದ್ದಲ್ಲಿ ಪ್ರಾಧಿಕಾರವು ಆದಾಯವನ್ನು ವೃದ್ಧಿಸಿಕೊಂಡು ಅಭಿವೃದ್ಧಿ ಪಥದಲ್ಲಿ ಸಾಗಲು ಸದೃಢವಾಗುತ್ತದೆ.

37. ನಗರ ಯೋಜನಾ ಮಂಡಳಿಗೆ ಉತ್ತಮತೆ ಶುಲ್ಕ ವಸೂಲಿಯ ವಂತಿಕೆ ಪಾವತಿಸದಿರುವುದು:–

2017–18ನೇ ಸಾಲಿನಲ್ಲಿ ಪ್ರಾಧಿಕಾರವು ಉತ್ತಮತೆ ಶುಲ್ಕ ರೂ.3468404/–ಗಳನ್ನು ಸಂಗ್ರಹಿಸಿದ್ದು ಇದರಲ್ಲಿ ಶೇಕಡ 5ರಷ್ಟು ಅಂದರೆ ರೂ.173420/–ಗಳನ್ನು ರಾಜ್ಯ ನಗರ ಯೋಜನಾ ಮಂಡಳಿಗೆ ಪಾವತಿಸಬೇಕಾಗಿರುತ್ತದೆ. ಪ್ರಾಧಿಕಾರದ ನೌಕರರಾದ ಶ್ರೀಮತಿ. ಸಿ.ಎಸ್.ನಾಗಮಣಿ, ಪ್ರ.ದ.ಸಹಾಯಕರು ಇವರು ಪ್ರಾಧಿಕಾರದಿಂದ ವರ್ಗಾವಣೆಗೊಂಡು ರಾಜ್ಯ ನಗರ ಯೋಜನಾ ಮಂಡಳಿ ಬೆಂಗಳೂರು ಇಲ್ಲಿ ಅನ್ಯ ಸೇವೆಯ ಮೇಲೆ ದಿನಾಂಕ:1–6–1995 ರಿಂದ 31–3–2017ರ ವರೆಗೆ ಸೇವೆ ಸಲ್ಲಿಸಿದ್ದು ಶ್ರೀಮತಿಯವರು ರಾಜ್ಯ ನಗರ ಯೋಜನಾ ಮಂಡಳಿ ಬೆಂಗಳೂರು ಇಲ್ಲಿ ದಿನಾಂಕ:1–4–2014ರಿಂದ 31–3–2017ರ ವರೆಗೆ ಅನ್ಯ ಸೇವೆಯಲ್ಲಿ ಸೇವೆ ಸಲ್ಲಿಸಿದ ಅವಧಿಗೆ ಪಿಂಚಣಿ ವಂತಿಕೆ ರೂ.108486/–ಗಳನ್ನು ರಾಜ್ಯ ನಗರ ಯೋಜನಾ ಮಂಡಳಿ ಬೆಂಗಳೂರು ರವರು ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪಾವತಿಸಿರುವುದಿಲ್ಲ.

ಈ ಹಿನ್ನಲೆಯಲ್ಲಿ ನಗರ ಯೋಜನಾ ಮಂಡಳಿಗೆ 2017–18ನೇ ಸಾಲಿಗೆ ಪಾವತಿಸಬೇಕಾದ ಉತ್ತಮತೆ ಶುಲ್ಕದ ಶೇಕಡ 5ರ ಮೊತ್ತ ರೂ.173420/–ಗಳಲ್ಲಿ ರೂ.108486/–ಗಳನ್ನು ಶ್ರೀಮತಿ ಸಿ.ಎಸ್ ನಾಗಮಣಿ, ನಿವೃತ್ತ ಪ್ರ.ದ.ಸ ಇವರ ಪಿಂಚಣಿ ವಂತಿಕೆಗೆ ಜಮಾ ಮಾಡಿಕೊಂಡು ಉಳಿಕೆ ರೂ.64934/–ಗಳನ್ನು ರಾಜ್ಯ ನಗರ ಯೋಜನಾ ಮಂಡಳಿಗೆ ಪಾವತಿಸಬಹುದಾಗಿದೆ. ಪ್ರಾಧಿಕಾರವು ಹೊಂದಾಣಿಕೆ ಮಾಡಿಕೊಂಡ ಪಿಂಚಣಿ ವಂತಿಕೆ ರೂ.108486/–ಗಳನ್ನು ಪ್ರಾಧಿಕಾರದ ಪಿಂಚಣಿ ನಿಧಿಗೆ ವರ್ಗಾಯಿಸಿಕೊಳ್ಳಲು ಪ್ರಾಧಿಕಾರದ ಆಡಳಿತ ವರ್ಗ ಕ್ರಮ ವಹಿಸಬಹುದಾಗಿದೆ.

38. ಪಿಂಚಣಿ ಟ್ರಸ್ಟ್ ಫಂಡ್ ನಿರ್ವಹಿಸುವ ಬಗ್ಗೆ:–

